# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣುಕು

## 20-03-2022



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ವಾಣಿ
4. ಉದಯ ವಾಣಿ
5. ಸಂಯುಕ್ತ ಕರ್ನಾಟಕ
6. ಹೊಸ ದಿಗಂತ
7. ವಾರ್ತಾ ಭಾರತಿ
8. ಸಂಜೆ ವಾಣಿ
9. ಈ ಸಂಜೆ

ಪ್ರಜಾವಾಣಿ

## 'ಬಿ ಪ್ಯಾಕ್' ಸಾರ್ವಜನಿಕ ಸ್ಥಳಗಳ ಸುರಕ್ಷತಾ ಸಮೀಕ್ಷಾ ವರದಿ ಬಿಡುಗಡೆ

# 'ತಂಗುದಾಣ ಪ್ರಯಾಣಿಕ ಸ್ನೇಹಿಯಾಗಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹದೇವಪುರ ಮತ್ತು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರಗಳಲ್ಲಿನ ಬಸ್ ತಂಗುದಾಣಗಳು ಪ್ರಯಾಣಿಕ ಸ್ನೇಹಿಯಾಗಬೇಕು ಮತ್ತು ಬೀದಿ ದೀಪಗಳಂತಹ ಮೂಲಸೌಕರ್ಯವನ್ನು ಸುಧಾರಿಸಬೇಕು ಎಂದು ಸಾರ್ವಜನಿಕ ಸ್ಥಳಗಳ ಸುರಕ್ಷತಾ ಸಮೀಕ್ಷಾ ವರದಿಯಲ್ಲಿ ಸಲಹೆ ನೀಡಲಾಗಿದೆ.

ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ-ಪ್ಯಾಕ್) ಮತ್ತು ಸಿಜಿಐ ಸಂಸ್ಥೆಗಳು ಈ ವರದಿಯನ್ನು ಸಿದ್ಧಪಡಿಸಿವೆ.

ಬಸ್ ನಿಲ್ದಾಣಗಳಲ್ಲಿ ಮಾಹಿತಿ ವ್ಯವಸ್ಥೆ, ನಕ್ಷೆ ವಿವರ ಹಾಗೂ ಉತ್ತಮ ಗುಣಮಟ್ಟದ ಆಸನ ವ್ಯವಸ್ಥೆಗಳನ್ನು ಕಲ್ಪಿಸಬೇಕು. ಉತ್ತಮ ಬೆಳಕಿನ ವ್ಯವಸ್ಥೆ ಇರಬೇಕು. ಪಾದಚಾರಿ ಮಾರ್ಗಗಳನ್ನೂ ಸುಧಾರಿಸಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉದ್ಯಾನಗಳು, ಅಂಗನವಾಡಿಗಳಲ್ಲಿ ಮೂಲಸೌಕರ್ಯಗಳನ್ನು ಸುಧಾರಿಸಬೇಕು. ಇದರಿಂದ, ಮಕ್ಕಳ ಚಟುವಟಿಕೆಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.



ನಗರದಲ್ಲಿ ಸಾರ್ವಜನಿಕ ಸ್ಥಳಗಳ ಸುರಕ್ಷತಾ ಸಮೀಕ್ಷಾ ವರದಿಯನ್ನು ಶಾಸಕ ಅರವಿಂದ ಲಿಂಬಾವಳಿ ಅವರು ಶನಿವಾರ ಬಿಡುಗಡೆ ಮಾಡಿದರು. 'ಬಿ ಸೇಫ್' ಕಾರ್ಯಕ್ರಮದ ಮುಖ್ಯಸ್ಥೆ ಚಿತ್ರಾ ತಳವಾರ, ಸಿಇಒ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ರೇವತಿ ಅಶೋಕ್, ಸಿಜಿಐ ಹಿರಿಯ ಉಪಾಧ್ಯಕ್ಷ ರಾಹುಲ್ ಘೋಡ್ಕೆ, ಜನಾಗ್ರಹದ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥೆ ಸಪ್ನಾ ಕರೀಂ, ನಟಿ ಪ್ರಣೀತಾ ಸುಭಾಷ್ ಇದ್ದರು – ಪ್ರಜಾವಾಣಿ ಚಿತ್ರ

ಈ ವರದಿಯನ್ನು ಶಾಸಕ ಅರವಿಂದ ಲಿಂಬಾವಳಿ ಅವರು ಶನಿವಾರ ಬಿಡುಗಡೆ ಮಾಡಿದರು. ಈ ಎರಡು ಕ್ಷೇತ್ರಗಳಲ್ಲಿನ 260 ಸಾರ್ವಜನಿಕ ಸ್ಥಳಗಳಲ್ಲಿ ಸಮೀಕ್ಷೆಯನ್ನು ವರದಿಯು ಒಳಗೊಂಡಿದೆ.

ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣದ ಕುರಿತ ಅಂಶಗಳ ಬಗ್ಗೆಯೂ ವಿಶ್ಲೇಷಿಸಲಾಗಿದೆ. 23 ಅಂಗನವಾಡಿ ಕೇಂದ್ರಗಳು, 71 ಬಸ್ ನಿಲ್ದಾಣಗಳು, 30 ಮಾರುಕಟ್ಟೆಗಳು, 37 ಉದ್ಯಾನಗಳು, 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 12 ಪೊಲೀಸ್ ಠಾಣೆಗಳು, 32 ಸಾರ್ವಜನಿಕ ಶೌಚಾಲಯಗಳ ಬಗ್ಗೆ ಸಮೀಕ್ಷೆ ನಡೆಸಲಾಗಿದೆ ಎಂದು ವಿವರಿಸಲಾಗಿದೆ.

ಮಹದೇವಪುರ ವಿಧಾನಸಭಾ ಕ್ಷೇತ್ರದ ಎಂಟು ವಾರ್ಡ್‌ಗಳು ಮತ್ತು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಏಳು ವಾರ್ಡ್‌ಗಳಲ್ಲಿ ಈ ಸಮೀಕ್ಷೆ ಕೈಗೊಳ್ಳಲಾಗಿತ್ತು. ವರದಿಯಲ್ಲಿನ ಶಿಫಾರಸ್ಸುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿದರೆ ಎರಡು ಕ್ಷೇತ್ರಗಳು ಮಹಿಳಾ ಸಬಲೀಕರಣ ಮತ್ತು ಸುರಕ್ಷತೆಯ ವಿಷಯದಲ್ಲಿ ಮಾದರಿಯಾಗುತ್ತವೆ ಎಂದು ತಿಳಿಸಲಾಗಿದೆ.

### 'ಬೀದಿ ದೀಪಗಳಿಗೆ ಆದ್ಯತೆ ನೀಡಬೇಕು'

'ಬೀದಿ ದೀಪಗಳನ್ನು ಅಳವಡಿಸಲು ಬಿಬಿಎಂಪಿ ಆದ್ಯತೆ ನೀಡಬೇಕು. ಬೀದಿ ದೀಪಗಳು ಇಲ್ಲದ ಕಾರಣ ಅಪಘಾತಗಳು ಸಂಭವಿಸುತ್ತಿವೆ. ಜತೆಗೆ, ಹೆಣ್ಣು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದಲೂ ಮುಖ್ಯವಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ರವಿಕಾಂತೇಗೌಡ ಹೇಳಿದರು.

ಸುರಕ್ಷಿತ ಸಾರ್ವಜನಿಕ ಸ್ಥಳಗಳು ಕುರಿತ ಬಿ ಪ್ಯಾಕ್ ಆಯೋಜಿಸಿದ್ದ ಚರ್ಚೆಯಲ್ಲಿ ಮಾತನಾಡಿದ ಅವರು, 'ಕಾಲಕ್ಕೆ ತಕ್ಕಂತೆ ಪೊಲೀಸ್ ಇಲಾಖೆಯೂ ಹಲವಾರು ಬದಲಾವಣೆಗಳನ್ನು ಕಾಣುತ್ತಿದೆ. ಬೇರೆ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಪೊಲೀಸರು ಶೀಘ್ರವಾಗಿ ಸ್ಪಂದಿಸುತ್ತಿದ್ದಾರೆ' ಎಂದು ಹೇಳಿದರು.

'ಕಷ್ಟಗಳು ಬಂದಾಗ ಜನರು ಮೊದಲು ಪೊಲೀಸರನ್ನು ನೆನಪಿಸಿಕೊಳ್ಳುತ್ತಾರೆ. ಬೀಟ್ ವ್ಯವಸ್ಥೆಯನ್ನು ಜನಸ್ನೇಹಿ ಮಾಡಲಾಗುತ್ತಿದ್ದು, ನಾಗರಿಕರನ್ನು ಸಹ ಸೇರಿಸಿಕೊಳ್ಳಲಾಗುತ್ತಿದೆ' ಎಂದು ವಿವರಿಸಿದರು.

# ಮತದಾರರ ಜಾಗೃತಿ ಸ್ಪರ್ಧೆ

**ಬೆಂಗಳೂರು:** ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ 'ನನ್ನ ಮತ ನನ್ನ ಭವಿಷ್ಯ- ಒಂದು ಮತದ ಶಕ್ತಿ' ಎಂಬ ವಿಷಯದ ಬಗ್ಗೆ ರಾಷ್ಟ್ರ ಮಟ್ಟದ ಮತದಾರರ ಜಾಗೃತಿಗಾಗಿ ವಿವಿಧ ಸ್ಪರ್ಧೆಗಳನ್ನು ಚುನಾವಣಾ ಆಯೋಗ ಆಯೋಜಿಸಿದೆ.

ರಸಪ್ರಶ್ನೆ, ಸ್ಲೋಗನ್, ಗಾಯನ, ಚಿತ್ರೀಕರಣ ಮತ್ತು ಪೋಸ್ಟರ್ ವಿನ್ಯಾಸ ಸ್ಪರ್ಧೆಗಳನ್ನು ನಡೆಸುತ್ತಿದೆ. ವಿಜೇತರಿಗೆ ಇ-ಪ್ರಮಾಣ ಪತ್ರ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಆಕರ್ಷಕ ಪೋಸ್ಟರ್ ರಚಿಸಬೇಕು. ಗಾಯನ ಸ್ಪರ್ಧೆಗೆ ಹಾಡಿನ ಅವಧಿ 3 ನಿಮಿಷ ಮೀರಬಾರದು. 1 ನಿಮಿಷ ಮೀರದ ವಿಡಿಯೊಗಳನ್ನು ಚಿತ್ರೀಕರಣ ಸ್ಪರ್ಧೆಗೆ ಕಳುಹಿಸಬಹುದು.

ವಿಜೇತರಿಗೆ ₹1 ಲಕ್ಷದವರೆಗೆ ಬಹುಮಾನ ನೀಡಲಾಗುವುದು. ಆಸಕ್ತರು ಮಾರ್ಚ್ 31ರೊಳಗೆ voter--contest@eci.gov.inನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ನಗರ ಜಿಲ್ಲಾ ಚುನಾವಣಾಧಿಕಾರಿ ಪರವಾಗಿ ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

# ಕೋವಿಡ್: ವರ್ಷದ ಬಳಿಕ ಚೀನಾದಲ್ಲಿ ಇಬ್ಬರ ಸಾವು

**ಶಾಂಘೈ/ ಬೀಜಿಂಗ್ (ರಾಯಿಟರ್ಸ್):** ವರ್ಷದ ಬಳಿಕ ಚೀನಾದಲ್ಲಿ ಕೋವಿಡ್‌ನಿಂದಾಗಿ ಸಾವು ಸಂಭವಿಸಿದೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ಶನಿವಾರ ತಿಳಿಸಿದೆ.

ಈಶಾನ್ಯ ಪ್ರಾಂತ್ಯ ಜಿಲಿನ್‌ನಲ್ಲಿ ಕೋವಿಡ್‌ನಿಂದ ಇಬ್ಬರು ಮೃತಪಟ್ಟಿದ್ದಾರೆ ಎಂದು ಆಯೋಗ ಮಾಹಿತಿ ನೀಡಿದೆ. ಈ ಹಿಂದೆ 2021ರ ಜನವರಿ 25ರಂದು ಕೋವಿಡ್‌ನಿಂದಾಗಿ ಮೃತಪಟ್ಟ ಪ್ರಕರಣ ವರದಿಯಾಗಿತ್ತು. ಆ ಬಳಿಕ ಚೀನಾದಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರ ವರದಿಯಾಗಿರಲಿಲ್ಲ.

ಮೃತರಲ್ಲಿ ಒಬ್ಬರು ಲಸಿಕೆ ಪಡೆದಿರಲಿಲ್ಲ ಹಾಗೂ ಇಬ್ಬರಲ್ಲೂ ಕೋವಿಡ್‌ಗೆ ಸಂಬಂಧಿಸಿದಂತೆ ಸೌಮ್ಯ ಲಕ್ಷಣಗಳಿದ್ದವು ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗದ ಅಧಿಕಾರಿ ಜಿಯಾವೊ ಯಾಹುಯಿ ತಿಳಿಸಿದ್ದಾರೆ. ಮೃತರಲ್ಲಿ ಒಬ್ಬರು 87 ವರ್ಷದವರು, ಇನ್ನೊಬ್ಬರು 65 ವರ್ಷದವರಾಗಿದ್ದಾರೆ.

ಈ ಎರಡು ಸಾವುಗಳಿಂದಾಗಿ ಚೀನಾದಲ್ಲಿ ಇಲ್ಲಿಯವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 4,638ಕ್ಕೆ ಏರಿಕೆಯಾಗಿದೆ. ಶುಕ್ರವಾರ ಒಂದೇ ದಿನ ಚೀನಾದಲ್ಲಿ 2,228 ಜನರಲ್ಲಿ ಸೋಂಕು ಪತ್ತೆಯಾಗಿದ್ದು, ಗುರುವಾರ 2,416 ಜನರಲ್ಲಿ ಸೋಂಕು ದೃಢಪಟ್ಟಿತ್ತು.

ಜಿಲಿನ್‌ನಲ್ಲಿ ಕಳೆದ ಒಂದು ವಾರದಿಂದ ಸಾವಿರಾರು ಕೋವಿಡ್ ಪ್ರಕರಣಗಳು ವರದಿಯಾಗಿವೆ. ಸೋಂಕಿತರ ಚಿಕಿತ್ಸೆಗಾಗಿ ಎಂಟು ತಾತ್ಕಾಲಿಕ ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆ.

ಹಾಂಗ್‌ಕಾಂಗ್‌ನಲ್ಲಿ ಶನಿವಾರ ಹೊಸದಾಗಿ 16,597 ಜನರಲ್ಲಿ ಕೋವಿಡ್- 19 ಪತ್ತೆಯಾಗಿದೆ. ಇಲ್ಲಿ ಶುಕ್ರವಾರ 20,000 ಜನರಲ್ಲಿ ಸೋಂಕು ದೃಢಪಟ್ಟಿತ್ತು.

### ದೇಶದಲ್ಲಿ 2,075 ಹೊಸ ಪ್ರಕರಣ

**ನವದೆಹಲಿ (ಪಿಟಿಐ):** ದೇಶದಾದ್ಯಂತ ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 2,075 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 71 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ. ಮೃತರಲ್ಲಿ 59 ಜನರು ಕೇರಳದವರಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಪ್ರಕಟಣೆ ತಿಳಿಸಿದೆ.

ಈ ಅವಧಿಯಲ್ಲಿ 3,383 ಮಂದಿ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 27,802ಕ್ಕೆ ತಲುಪಿದ್ದು ದೈನಂದಿನ ಕೋವಿಡ್ ದೃಢ ಪ್ರಮಾಣ ಶೇ 0.56 ಆಗಿದೆ. ದೇಶದಲ್ಲಿ 181.04 ಕೋಟಿ ಕೋವಿಡ್ ಲಸಿಕೆ ಡೋಸ್ ನೀಡಲಾಗಿದೆ. ಹಾಗೆಯೇ 78.22 ಕೋಟಿ ಕೋವಿಡ್ ಮಾದರಿ ಪರೀಕ್ಷಿಸಲಾಗಿದೆ.

# ಬಡ ಮಕ್ಕಳಿಗಾಗಿ ಶಿಕ್ಷಣಕ್ಕೆ ಆದ್ಯತೆ



ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಡಾ.ರಾಜ್‌ಕುಮಾರ್ ವಾರ್ಡ್ ವ್ಯಾಪ್ತಿಯ ಮಾಗಡಿ ರಸ್ತೆ ಪೊಲೀಸ್ ಕಾಲೋನಿಯಲ್ಲಿ ನೂತನವಾಗಿ ನಿರ್ಮಿಸಿರುವ ಶಾಲಾ ಕಟ್ಟಡವನ್ನು ವಸತಿ ಸಚಿವ ವಿ.ಸೋಮಣ್ಣ ಹಾಗೂ ತೋಟಗಾರಿಕೆ ಸಚಿವ ಮುನಿರತ್ನ ಉದ್ಘಾಟಿಸಿದರು. ಅ.ದೇವೇಗೌಡ, ಡಾ| ಅರುಣ್ ಇದ್ದರು.

**ಶಾಲಾ ಕಟ್ಟಡಕ್ಕೆ ಸಚಿವ ಚಾಲನೆ**

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಉತ್ತಮ ಶಿಕ್ಷಣ ಪಡೆಯುವ ಮೂಲಕ ಬಡವರ ಮತ್ತು ಜನ ಸಾಮಾನ್ಯರ ಮಕ್ಕಳು ದೇಶದ ಮುಖ್ಯವಾಹಿನಿಗೆ ಬರಬೇಕು. ಈ ಮೂಲಕ ದೇಶಾಭಿವೃದ್ಧಿಯಾಗಿ ಆರೋಗ್ಯಕರ ಸಮಾಜ ನಿರ್ಮಿಸಿ ಎಂದು ವಸತಿ ಸಚಿವ ವಿ.ಸೋಮಣ್ಣ ಅಭಿಪ್ರಾಯಪಟ್ಟರು.

ಶನಿವಾರ ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾಗಡಿ ರಸ್ತೆ ಪೊಲೀಸ್ ಕಾಲೋನಿಯಲ್ಲಿ ನೂತನವಾಗಿ ನಿರ್ಮಿಸಿರುವ ಶಾಲಾ ಕಟ್ಟಡವನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದ ಅವರು, ಬಡಜನರ ಮಕ್ಕಳು ಮುಂದೆ ಬರಬೇಕೆಂಬ ಉದ್ದೇಶದಿಂದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ ಎಂದು ಹೇಳಿದರು. ಹಣದ ತೊಂದರೆ ಇದ್ದಾಗ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಸಹಕಾರ ನೀಡಿದ್ದರು. ಆ ನಂತರ ಈಗಿನ ಅಭಿವೃದ್ಧಿ ಕಾರ್ಯದ ಕೆಲಸಕ್ಕೆ ಉಪ ಮುಖ್ಯಮಂತ್ರಿಯಾಗಿದ್ದ ಡಾ| ಜಿ.ಪರಮೇಶ್ವರ್ ಅವರು ಕಾರಣ ಎಂದರು. ತೋಟಗಾರಿಕೆ ಸಚಿವ ಮುನಿರತ್ನ, ಜಂಟಿ ಆಯುಕ್ತ ಶ್ರೀನಿವಾಸ್, ನಾಗರಾಜ್, ಕೃಷ್ಣಮೂರ್ತಿ, ರಾಮಪ್ಪ, ವಾಗೇಶ್ ಇತರರಿದ್ದರು.

# ನಗರದಲ್ಲಿ ಹಾವುಗಳ ಹಾವಳಿ ದಿಢೀರ್ ಹೆಚ್ಚಳ

## ಬಿಸಿಲು ಹೆಚ್ಚಳ: ಎಲ್ಲೆಂದರಲ್ಲಿ ಉರಗ ಪ್ರತ್ಯಕ್ಷ | ಬಿಬಿಎಂಪಿಗೆ ನಿತ್ಯ 50 ದೂರು | ಆದರೆ ಹಿಡಿಯಲು ಇರುವುದು ಏಳೇ ಮಂದಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಸಿಲಿನ ಬೇಗೆಯಿಂದ ಸಿಲಿಕಾನ್ ಸಿಟಿಯ ಅನೇಕ ಬಡಾವಣೆಗಳಲ್ಲಿ ಉರಗಗಳ ಕಾಟ ಹೆಚ್ಚಾಗಿದ್ದು ಮನೆ, ಹಾಲ್, ಕಾಂಪೌಂಡ್‌ಗಳ ಸಂದಿ-ಗೊಂದು ಸೇರಿದಂತೆ ಎಲ್ಲೆಂದರಲ್ಲಿ ಹಾವು ಪತ್ತೆಯಾಗುತ್ತಿವೆ. ಇದರಿಂದ ನಾಗರಿಕರಲ್ಲಿ ಆತಂಕ ಮೂಡಿದೆ.

ಬಿಬಿಎಂಪಿ ವ್ಯಾಪ್ತಿಯ ಪುಟ್ಟೇನಹಳ್ಳಿ, ರಾಜರಾಜೇಶ್ವರಿ ನಗರ, ವಿದ್ಯಾರಣ್ಯಪುರ, ಸರ್ಜಾಪುರ ರಸ್ತೆ, ಯಲಹಂಕ, ನಾಗರಬಾವಿ, ಎಚ್‌ಬಿಆರ್ ಲೇಔಟ್ ಸೇರಿದಂತೆ ಸುತ್ತಮುತ್ತಲ ಬಡಾವಣೆಗಳಲ್ಲಿ ನಿತ್ಯವೂ ಒಂದಿಲ್ಲೊಂದು ಜಾಗದಲ್ಲಿ ಉರಗಗಳು ಕಾಣಸಿಗುತ್ತಿವೆ. ಇದರಿಂದಾಗಿ ಪಾಲಿಕೆಯ ವನ್ಯಜೀವಿ ಸಂರಕ್ಷಣಾ ತಂಡ ಉರಗಗಳನ್ನು ಹಿಡಿಯಲು ಹರಸಾಹಸ ಪಡುತ್ತಿದೆ.

ನಿತ್ಯ ಉರಗಗಳಿಗೆ ಸಂಬಂಧಿಸಿದಂತೆ ಬಿಬಿಎಂಪಿ ನಿಯಂತ್ರಣ ಕೊಠಡಿಗಳಿಗೆ 45ರಿಂದ 50 ಕರೆಗಳು ಬರುತ್ತಿವೆ. ಆದರೆ, ವನ್ಯಜೀವಿ ಸಂರಕ್ಷಣಾ ತಂಡದಲ್ಲಿ ಕೇವಲ 7 ಮಂದಿ ಮಾತ್ರ ಉರಗಗಳನ್ನು ಹಿಡಿಯುವವರು ಇದ್ದಾರೆ. ಈ ಕಾರಣದಿಂದ ಎಲ್ಲ ಕರೆಗಳನ್ನು ಸ್ವೀಕರಿಸಲು ಸಾಧ್ಯವಾಗುತ್ತಿಲ್ಲ, ಮನೆ, ಅಡುಗೆ ಮನೆ, ಬಾತ್‌ರೂಂ, ಕಾಂಪೌಂಡ್ ಒಳಗಡೆ ಇರುವ ಮತ್ತು ನಾಗರಿಕರಿಗೆ ತೊಂದರೆ ಆಗುವಂತಿದ್ದರೆ ಮಾತ್ರ ಅಲ್ಲಿನ ಹಾವುಗಳನ್ನು ಹಿಡಿಯಲು ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

**ಬಿಸಿಲು ಹೆಚ್ಚಳ:** ರಾಜಧಾನಿ ಬೆಂಗಳೂರಿನಲ್ಲಿ ಕುರುಚಲು ಕಾಡುಗಳು, ಕೆರೆಗಳು ಇಲ್ಲವಾಗುತ್ತಿವೆ. ಚರಂಡಿಗಳು ಕೂಡ ಕಾಂಕ್ರಿಟ್‌ನಿಂದ ನಿರ್ಮಾಣಗೊಂಡಿದ್ದು ಉರಗಗಳಿಗೆ ಜೀವಿಸಲು ಸೂಕ್ತ ಸ್ಥಳವೇ ಇಲ್ಲದಂತಾಗಿದೆ. ಕಳೆದೆರಡು ವಾರಗಳಿಂದ ನಗರದಲ್ಲಿ ಬಿಸಿಲಿನ ಪ್ರತಾಪ ಹೆಚ್ಚಿದ್ದು ನಿತ್ಯ 34 ಡಿಗ್ರಿ ಸೆಲ್ಸಿಯಸ್‌ಗೂ ಅಧಿಕ ಉಷ್ಣಾಂಶ ದಾಖಲಾಗುತ್ತಿದೆ. ಅತೀ ಉಷ್ಣತೆಯಲ್ಲಿ ಉರಗಗಳಿಗೆ ಉಳಿಗಾಲವಿಲ್ಲ, ಆದ್ದರಿಂದ ತಂಪು ಜಾಗಗಳನ್ನು ಹುಡುಕುತ್ತಾ ಬಿಲದಿಂದ ಮೇಲೆದ್ದು ಬರುತ್ತಿವೆ ಎಂದು ಉರಗ ತಜ್ಞರು ಮಾಹಿತಿ ನೀಡಿದ್ದಾರೆ.





**ಸಂಪರ್ಕಿಸಿ**

ಹಾವುಗಳು ಮನೆ ಸುತ್ತಮುತ್ತ ಕಂಡು ಬಂದಲ್ಲಿ ಬಿಬಿಎಂಪಿ ಕೇಂದ್ರ ನಿಯಂತ್ರಣ ಕೊಠಡಿ ಸಂಖ್ಯೆ : 080 22221188 ಅಥವಾ ಉರಗ ತಜ್ಞ ಮೋಹನ್ : 98450 80903 ಅನ್ನು ಸಂಪರ್ಕಿಸಬಹುದು.

### ಉರಗಗಳಿಗೆ ಶೀತವೂ ಆಗದು, ಉಷ್ಣವೂ ಆಗದು

ಮಾರ್ಚ್, ಏಪ್ರಿಲ್ ಉರಗಗಳು ಮೊಟ್ಟೆ ಇಡುವ ಸಮಯ. ಈ ಮೊಟ್ಟೆಗಳು ಜೂನ್‌ನಲ್ಲಿ ಒಡೆದು ಮರಿಗಳು ಹೊರ ಬರುತ್ತವೆ. ಪ್ರಸ್ತುತ ಕಾಡುಗಳು, ಚರಂಡಿ, ಕಲ್ಲು ಚಪ್ಪಡಿಗಳು ಸಹ ಸಿಗುತ್ತಿಲ್ಲ, ಎಲ್ಲವೂ ಕಾಂಕ್ರಿಟ್‌ಮಯವಾಗಿದ್ದು ಹಾವುಗಳ ಆವಾಸ ಸ್ಥಾನವನ್ನೆಲ್ಲ ಮನುಷ್ಯರು ಆಕ್ರಮಿಸಿಕೊಂಡಿದ್ದಾರೆ. ಹಾಗಾಗಿ ಮನೆ, ಕಾಂಪೌಂಡ್ ಸಂದಿಗಳು, ಪಾರ್ಕ್‌ಗಳು ಇತ್ಯಾದಿಗಳಲ್ಲಿ ಹಾವುಗಳು ಕಂಡು ಬರುತ್ತಿವೆ. ಉರಗಗಳು ಅತಿ ಶೀತ ಪ್ರದೇಶ ಮತ್ತು ಹೆಚ್ಚು ಉಷ್ಣತೆಯಿರುವ ಪ್ರದೇಶಗಳಲ್ಲಿ ಜೀವಿಸುವುದಿಲ್ಲ, ಆದ್ದರಿಂದ ಜೀವಿಸಲು ಸೂಕ್ತವಾದ ಸ್ಥಳಗಳನ್ನು ಹುಡುಕಿಕೊಂಡು ಹೊರ ಬರುತ್ತಿವೆ. ಬೆಂಗಳೂರಿನಲ್ಲಿ ಹಲವು ಬಡಾವಣೆಗಳಲ್ಲಿ ಹೆಚ್ಚಾಗಿ ನಾಗರಹಾವು, ಮಂಡಲದ ಹಾವು, ಕೇರೆ ಹಾವು, ನೀರಾವು, ತೋಳ ಮೂತಿ ಹಾವು, ಟ್ರೀಸ್ನೇಕ್ ಹೆಚ್ಚಾಗಿವೆ. ಅದರಲ್ಲೂ ಸರ್ಜಾಪುರ, ಎಚ್‌ಬಿಆರ್ ಲೇಔಟ್, ಹೆಬ್ಬಾಳ, ವೈಟ್‌ಫೀಲ್ಡ್, ಯಲಹಂಕ ಸೇರಿದಂತೆ ಇತ್ಯಾದಿ ಬಡಾವಣೆಗಳಲ್ಲಿ ನಾಗರಹಾವು ಮತ್ತು ಕೇರೆ ಹಾವು ಹೆಚ್ಚಾಗಿ ಕಂಡು ಬರುತ್ತವೆ ಎಂದು ಉರಗ ತಜ್ಞ ಮೋಹನ್ ಮಾಹಿತಿ ನೀಡಿದರು. ಉರಗ ತಜ್ಞರು ಅಥವಾ ವನ್ಯಜೀವಿ ಸಂರಕ್ಷಣಾ ತಂಡದವರು ಹಿಡಿದ ಹಾವುಗಳನ್ನು ಜಾರಕಬಂಡೆ, ತುರುವೆಕೆರೆ ಕಾಡು ಅಥವಾ ಜನ ವಸತಿ ಇಲ್ಲದ ಪ್ರದೇಶಗಳಲ್ಲಿ ಹೋಗಿ ಬಿಟ್ಟು ಬರುತ್ತಾರೆ ಎಂದು ಬಿಬಿಎಂಪಿ ವನ್ಯಜೀವಿ ತಂಡದ ಅಧಿಕಾರಿಗಳು ತಿಳಿಸಿದ್ದಾರೆ.

ಕನ್ನಡಪ್ರಭ



# ಜಗತ್ತಿನಾದ್ಯಂತ ಈಗ ಒಮಿಕ್ರೋನ್-2 ಅಲೆ!

## ಪೂರ್ವ ಏಷ್ಯಾ, ಯುರೋಪ್ ಬಳಿಕ ಅಮೆರಿಕದಲ್ಲೂ ಅಬ್ಬರ

## ತಿಂಗಳಲ್ಲಿ 75% ಇದೇ ತಳಿ | ಅಮೆರಿಕದಲ್ಲಿ ಲಾಕ್ಡೌನ್ ಆತಂಕ

**ವಾಷಿಂಗ್ಟನ್:** ಚೀನಾ, ದಕ್ಷಿಣ ಕೊರಿಯಾದಂಥ ಪೂರ್ವ ಏಷ್ಯಾ ಮತ್ತು ಯುರೋಪ್ ದೇಶಗಳಲ್ಲಿ ಒಮಿಕ್ರೋನ್‌ನ 'ಬಿಎ.2' ಉಪತಳಿ ಅಬ್ಬರಿಸಿ ಸೋಂಕು ಹೆಚ್ಚಿಸುತ್ತಿದ್ದರೆ, ಇನ್ನೊಂದೆಡೆ ಅಮೆರಿಕದಲ್ಲೂ 'ಬಿಎ.2' ಅಬ್ಬರ ಆರಂಭವಾಗಿದ್ದು, ಅಲ್ಲಿ ಲಾಕ್‌ಡೌನ್ ಹೇರುವ ಎಚ್ಚರಿಕೆ ನೀಡಲಾಗಿದೆ. ಇದು ವಿಶ್ವಾದ್ಯಂತ ಒಮಿಕ್ರೋನ್‌ನ 2ನೇ ಅಲೆ ಏಳುವ ಆತಂಕ ಹುಟ್ಟುಹಾಕಿದೆ. ಇದಕ್ಕೆ ಪೂರಕವಾಗಿ, 'ವಿಶ್ವ ಆರೋಗ್ಯ ಸಂಸ್ಥೆ ವಿಶ್ವಾದ್ಯಂತ ತಿಂಗಳಲ್ಲಿ 4 ಲಕ್ಷ ಜಿನೋಮ್ ಪರೀಕ್ಷೆ ಕೈಗೊಂಡಿದೆ. ಇದರಲ್ಲಿ ಶೇ.99ರಷ್ಟು ಒಮಿಕ್ರೋನ್ ಸೋಂಕು ಪತ್ತೆಯಾಗಿದೆ. ಈ 99 ಪ್ರತಿಶತ ಒಮಿಕ್ರೋನ್ ಪ್ರಕರಣಗಳಲ್ಲಿ ಬಿಎ.2 ಪಾಲು ಶೇ.75 ರಷ್ಟಿದೆ' ಎಂದು ಹಿರಿಯ ಅಧಿಕಾರಿ ಮಾರಿಯಾ ತಿಳಿಸಿದ್ದಾರೆ. ↘ 6

ಚೀನಾದಲ್ಲಿ [illegible] ಕೋವಿಡ್ ಸಾವು ↘ 13

# ಈಗ ಒಮಿಕ್ರೋನ್-2 ಅಲೆ!

↙ 3ನೇ ಪುಟದಿಂದ

**ಯುರೋಪ್, ಅಮೆರಿಕದಲ್ಲಿ ಅಬ್ಬರ ಆರಂಭ:** ದಕ್ಷಿಣ ಕೊರಿಯಾದಲ್ಲಿ ನಿತ್ಯ 4ರಿಂದ 6 ಲಕ್ಷ ಪ್ರಕರಣ ದಾಖಲಾಗುತ್ತಿದ್ದು, ಇದಕ್ಕೆ ಬಹುಪಾಲು ಬಿಎ.2 ತಳಿಯ ಅಬ್ಬರ ಕಾರಣವಾಗಿದೆ. ಇನ್ನು ಡೆನ್ಮಾರ್ಕ್‌ನ ಒಟ್ಟು ಪ್ರಕರಣದಲ್ಲಿ ಬಿಎ.2 ಪಾಲು ಶೇ.82ರಷ್ಟು ಹಾಗೂ ಜರ್ಮನಿಯ ಹೊಸ ಕೇಸಲ್ಲಿ ಶೇ.50 ಪಾಲು ಇದೆ. ಬ್ರಿಟನ್‌ನಲ್ಲಿ ಅಧಿಕೃತ ಬಿಎ.2 ಅಂಕಿ-ಅಂಶ ಲಭ್ಯವಿಲ್ಲ. ಆದರೆ 1 ವಾರದಲ್ಲಿ ಸೋಂಕು ಶೇ.47ರಷ್ಟು ಏರಿದ್ದು, ಇದಕ್ಕೆ ಬಿಎ.2 ಕಾರಣ ಎಂದು ಹೇಳಲಾಗಿದೆ.

ಇದರ ಬೆನ್ನಲ್ಲೇ ಅಮೆರಿಕದಲ್ಲಿ ಕೂಡ ಬಿಎ.2 ಅಬ್ಬರ ಆರಂಭವಾಗಿದೆ. ಮಾ.12ಕ್ಕೆ ಅಂತ್ಯಗೊಂಡ ವಾರದ ಒಟ್ಟು ಕೇಸಿನಲ್ಲಿ ಬಿಎ.2 ಪ್ರಮಾಣ, ಆ ಹಿಂದಿನ ವಾರದ ಶೇ.14.2ರಿಂದ ಶೇ.23.1ಕ್ಕೇರಿದೆ. ವಿವಿಧ ರಾಜ್ಯಗಳಾದ ನ್ಯೂಜೆರ್ಸಿ, ನ್ಯೂಯಾರ್ಕ್, ಪೋರ್ಟೋರಿಕೊ, ವರ್ಜಿನ್ ಐಲ್ಯಾಂಡ್‌ನ ಒಟ್ಟು ಕೇಸಿನಲ್ಲಿ ಬಿಎ.2 ಪ್ರಮಾಣ ಶೇ. 39ರಷ್ಟಿದೆ. ಇದು ಬಿಎ.2 ಕ್ರಮೇಣ ಪ್ರಬಲಗೊಳ್ಳುತ್ತಿದೆ ಎಂಬುದರ ದ್ಯೋತಕವಾಗಿದೆ.

**ಅಮೆರಿಕದಲ್ಲಿ ಲಾಕ್‌ಡೌನ್ ಎಚ್ಚರಿಕೆ:** 'ಸೋಂಕು ನಿಯಂತ್ರಣಕ್ಕಾಗಿ ಹೆಚ್ಚುವರಿ ಕೋವಿಡ್ ಲಾಕ್ಡೌನ್ ನಿರ್ಬಂಧ ಕ್ರಮಗಳನ್ನು ಜಾರಿಗೊಳಿಸಬೇಕಾಗಿ ಬರಬಹುದು' ಎಂದು ಅಮೆರಿಕದ ಖ್ಯಾತ ಸಾಂಕ್ರಾಮಿಕ ರೋಗ ತಜ್ಞ ಡಾ. ಆ್ಯಂಟನಿ ಫೌಸಿ ಎಚ್ಚರಿಕೆ ನೀಡಿದ್ದಾರೆ 'ಕೊರೋನಾ ವೈರಾಣು ಒಮಿಕ್ರೋನ್‌ನ ಉಪತಳಿ 'ಬಿಎ.2' ದಾಳಿಯಿಂದ ದೇಶದಲ್ಲಿ ಸೋಂಕು ಮತ್ತೆ ವ್ಯಾಪಕವಾಗುವ ಸಾಧ್ಯತೆ ಒದೆ. ಈಗಾಗಲೇ ಬ್ರಿಟನ್‌ನ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಕೋವಿಡ್ ನಿರ್ಬಂಧಗಳು ಸಡಿಲಿಕೆಯಾಗಿರುವುದು, ಲಸಿಕೆಯ ಪರಿಣಾಮ ಕಡಿಮೆಯಾಗುತ್ತಿರುವುದು ಮತ್ತು ಲಸಿಕೆ ವಿತರಣೆ ಗುರಿಯಲ್ಲಿ ಹಿಂದೆ ಬಿದ್ದಿರುವುದು, ಅಮೆ ರಿಕದಲ್ಲೂ ಮತ್ತೆ ಸೋಂಕು ಏರಿಕೆಗೆ ಕಾರಣವಾಗ ಬಹುದು' ಎಂದು ಫೌಸಿ ಎಚ್ಚರಿಸಿದ್ದಾರೆ.

### ಕಣ್ತಪ್ಪಿಸುವ ಉಪತಳಿ ಬಿಎ.2

ಒಮಿಕ್ರೋನ್‌ನ ಮೊದಲ ರೂಪಾಂತರಿಯನ್ನು 'ಬಿಎ.1' ಎಂದು ಗುರುತಿಸಲಾಗಿತ್ತು. ಈ ಹಿಂದಿನ ರೂಪಾಂತರಿ ವೈರಸ್‌ಗಳಿಗೆ ಹೋಲಿಸಿದರೆ ಇದನ್ನು ಸುಲಭವಾಗಿ ಗುರುತಿಸಬಹುದಿತ್ತು. ಸ್ಪೈಕ್ ಪ್ರೋಟೀನ್‌ನಲ್ಲಿ ಆಗಿರುವ ರೂಪಾಂತರವು ಅದು ಯಾವ ತಳಿ ಎಂದು ಗುರುತಿಸಲು ಸಹಾಯ ಮಾಡುತ್ತವೆ. ಆದರೆ ಹೊಸ ಉಪತಳಿ 'ಬಿಎ.2'ನಲ್ಲಿ ಕೆಲ ಬದಲಾವಣೆಗಳು ರ್‍ಯಾಪಿಡ್ ಪರೀಕ್ಷೆಯಲ್ಲಿ ಸುಲಭವಾಗಿ ಪತ್ತೆ ಯಾಗುತ್ತಿಲ್ಲ. ಹೀಗಾಗಿ ಇದು ಯಾವ ತಳಿ ಎಂದು ಗುರುತಿಸಲು ಕಷ್ಟ. ಹೀಗಾಗಿಯೇ ಇದನ್ನು ಸ್ಟೆಲ್ತ್ ತಳಿ (ಕಣ್ತಪ್ಪಿಸುವ ರೂಪಾಂತರಿ ಉಪತಳಿ) ಎನ್ನಲಾಗುತ್ತದೆ. ಅಷ್ಟು ಗುಪ್ತಗಾಮಿನಿಯಾಗಿ ಇದು ಇರುತ್ತದೆ.

# 6 ತಿಂಗಳಲ್ಲಿ ವಿಂಡ್‌ಟನಲ್ ಜಂಕ್ಷನ್ ಕೆಳಸೇತುವೆ ಪೂರ್ಣ: ಗೌರವ್ ಗುಪ್ತಾ



**ಬೆಂಗಳೂರು**: ವಿಂಡ್‌ಟನಲ್ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಕೆಳಸೇತುವೆ ಕಾಮಗಾರಿಯು ಪ್ರಗತಿಯಲ್ಲಿದೆ, ಎನ್‌ಎಎಲ್ ಮತ್ತು ಇಸ್ರೋ ಸಂಸ್ಥೆಗೆ ಸೇರಿದ ಜಾಗವನ್ನು ಭೂಸ್ವಾಧೀನ ಪಡಿಸಿಕೊಂಡಿದ್ದು, ಮುಂದಿನ ಆರು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್‌ಗುಪ್ತಾ ಹೇಳಿದರು. ಶನಿವಾರ ಮಹದೇವಪುರ ವಲಯ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ತಪಾಸಣೆ ನಡೆಸಿ ಅವರು ಮಾತನಾಡಿದರು. ವಿಂಡ್‌ಟನಲ್ ಜಂಕ್ಷನ್ ಬಳಿ ಬಳಿ ನಿರ್ಮಿಸುತ್ತಿರುವ ಕೆಳಸೇತುವೆ ರಿಟೈನಿಂಗ್ ಗೋಡೆ ಕಾಮಗಾರಿ ಪೂರ್ಣಗೊಳಿಸಲಾಗಿದೆ. ರಸ್ತೆಯ ಇನ್ನೊಂದು ಭಾಗದಲ್ಲಿ ಬದಲಿ ವಾಹನ ಸಂಚಾರಕ್ಕೆ ಅನುಮತಿ ಪಡೆದು ಸಂಚಾರಿ ಮಾರ್ಗ ಬದಲಾವಣೆ ಯಾದ ಕೂಡಲೆ ರಿಟೈನಿಂಗ್ ಗೋಡೆ ಕಾಮಗಾರಿ ಮತ್ತು ಪ್ರೀ ಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಸಿ ಕಾಮಗಾರಿಯನ್ನು ಮುಂದಿನ 6 ತಿಂಗಳೊಳಗಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು. ಪಾಲಿಕೆಗೆ ಸೇರ್ಪಡೆಯಾಗಿರುವ 110 ಹಳ್ಳಿಗಳ ರಸ್ತೆ ಪುನಶ್ಚೇತನ ಮಾಡಲು ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ಈ ಪೈಕಿ ಬೆಳ್ಳಂದೂರು ವಾರ್ಡ್‌ನಲ್ಲಿ ಬರುವ 11 ಹಳ್ಳಿಗಳ ರಸ್ತೆ ಪುನಶ್ಚೇತನಕ್ಕಾಗಿ 18 ಪ್ಯಾಕೇಜ್‌ಗಳಲ್ಲಿ ₹210 ಕೋಟಿ ಅನುದಾನ ಮೀಸಲಿಟ್ಟಿದೆ. ಈ ಕುರಿತು ಹರಳೂರಿನ ಜೆಆರ್ ಲೇಔಟ್‌ಗೆ ಭೇಟಿ ನೀಡಿದ ಮುಖ್ಯ ಆಯುಕ್ತರು ರಸ್ತೆ ಪುನಶ್ಚೇತನ ಕಾರ್ಯ ವೀಕ್ಷಿಸಿದರು. ಈ ಸಂದರ್ಭದಲ್ಲಿ ಮುಖ್ಯ ಎಂಜಿನಿಯರ್ ಪರಮೇಶ್ವರಯ್ಯ ಮಾತನಾಡಿ, ಎಲ್ಲ ರಸ್ತೆಗಳ ಪುನಶ್ಚೇತನ ಕಾರ್ಯ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ಚರಂಡಿ, ರಸ್ತೆ ಬದಿ ಚರಂಡಿಗಳಿಗೆ ಸ್ಲ್ಯಾಬ್‌ಗಳ ಅಳವಡಿಕೆ, ಪಾದಚಾರಿ ಮಾರ್ಗ, ರಸ್ತೆಗಳಿಗೆ ಡಾಂಬರೀಕರಣ ಕೆಲಸ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

# ಮತ್ತೆ 100ರ ಗಡಿ ದಾಟಿದ ಸೋಂಕಿತರ ಸಂಖ್ಯೆ

**ಬೆಂಗಳೂರು**: ರಾಜಧಾನಿಯಲ್ಲಿ 3 ದಿನಗಳ ಬಳಿಕ ಮತ್ತೆ ಕೊರೋನಾ ಪ್ರಕರಣಗಳು 100 ಗಡಿ ದಾಟಿವೆ. ಶನಿವಾರ 138 ಮಂದಿಗೆ ಸೋಂಕು ತಗುಲಿದ್ದು, 110 ಮಂದಿ ಗುಣಮುಖರಾಗಿದ್ದಾರೆ. ಒಬ್ಬ ಸೋಂಕಿತ ಸಾವಿಗೀಡಾಗಿದ್ದಾನೆ. ಸದ್ಯ 1,741 ಸಕ್ರಿಯ ಸೋಂಕಿ ತರು ಆಸ್ಪತ್ರೆ/ಮನೆಯಲ್ಲಿ ಚಿಕಿತ್ಸೆ, ಆರೈಕೆಯಲ್ಲಿದ್ದಾರೆ. 10 ಸಾವಿರ ಪರೀಕ್ಷೆ ನಡೆದಿದ್ದು, ಶೇ.0.9ರಷ್ಟು ಪಾಸಿಟಿವಿಟಿ ದರ ದಾಖಲಾಗಿದೆ. ಶುಕ್ರವಾರಕ್ಕೆ ಹೋಲಿಸಿದರೆ ಪ್ರಕರಣಗಳು 54ಕ್ಕೆ ಹೆಚ್ಚಳವಾಗಿವೆ. (ಶುಕ್ರವಾರ 84 ಕೇಸ್, 2 ಸಾವು). ಮಾ.16ರಿಂದ ಸತತ 3 ದಿನ 100ಕ್ಕಿಂತ ಕಡಿಮೆ ಇದ್ದ ಹೊಸ ಪ್ರಕರಣ ಮತ್ತೆ 100 ಗಡಿ ದಾಟಿವೆ. ಸೋಂಕು ಪರೀಕ್ಷೆಗಳಲ್ಲಿ ಹೆಚ್ಚಿನ ವ್ಯತ್ಯಯವಾಗಿಲ್ಲ. ಸದ್ಯ ಸಕ್ರಿಯ ಸೋಂಕಿತರ ಪೈಕಿ 47 ಮಂದಿ ಆಸ್ಪತ್ರೆಯಲ್ಲಿದ್ದಾರೆ. ಇದರಲ್ಲಿ 6 ಮಂದಿ ವೆಂಟಿಲೇಟರ್‌ನಲ್ಲಿ, 11 ಮಂದಿ ಐಸಿಯುನಲ್ಲಿ, 4 ಮಂದಿ ಆಕ್ಸಿಜನ್, ಸಾಮಾನ್ಯ ಹಾಸಿಗೆಗಳಲ್ಲಿ 26 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.



# ಚೀನಾದಲ್ಲಿ ಕೋವಿಡ್‌ಗೆ ಇಬ್ಬರು ಬಲಿ: 1 ವರ್ಷದಲ್ಲೇ ಮೊದಲು

## 2021ರ ಜನವರಿ ಬಳಿಕ ಒಂದೂ ಸಾವು ಸಂಭವಿಸಿರಲಿಲ್ಲ

## 2157 ಕೋವಿಡ್ ಕೇಸು, ಮೊನ್ನೆಗಿಂತ ಕೊಂಚ ಕಮ್ಮಿ

**ಬೀಜಿಂಗ್ / ಸಿಯೋಲ್:** ಚೀನಾ ಹಾಗೂ ದಕ್ಷಿಣ ಕೊರಿಯಾದಲ್ಲಿ ಕೊರೋನಾ ಆರ್ಭಟ ಮುಂದುವರೆದಿದೆ. ಚೀನಾದಲ್ಲಿ 2021 ಜನವರಿ ನಂತರ ಮೊದಲ ಬಾರಿ ಇಬ್ಬರು ಕೋವಿಡ್ ಸೋಂಕಿಗೆ ಬಲಿಯಾಗಿದ್ದಾರೆ.

'ದೇಶದಲ್ಲಿ ಸುಮಾರು 1 ವರ್ಷಕ್ಕೂ ಅಧಿಕ ಕಾಲ ಯಾವುದೇ ಸಾವು ಸಂಭವಿಸಿರಲಿಲ್ಲ. ಆದರೆ ಶನಿವಾರ ಒಂದೇ ದಿನ 2 ಸಾವುಗಳು ವರದಿಯಾಗಿವೆ. ಎರಡೂ ಸಾವುಗಳು ಈಶಾನ್ಯ ಚೀನಾದ ಜಿಲಿನ್ ಪ್ರಾಂತ್ಯದಲ್ಲಿ ಸಂಭವಿಸಿವೆ. ಮೃತಪಟ್ಟ ಇಬ್ಬರೂ ವ್ಯಕ್ತಿಗಳು ವೃದ್ಧರಾಗಿದ್ದು, ಅವರಲ್ಲಿ ಒಬ್ಬರು ಕೋವಿಡ್ ಲಸಿಕೆ ತೆಗೆದುಕೊಂಡಿರಲಿಲ್ಲ' ಎಂದು ಚೀನಾದ ಆರೋಗ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇದರೊಂದಿಗೆ ಈವರೆಗೆ ದೇಶದಲ್ಲಿ ಒಟ್ಟು 4,638 ಜನರು ಕೋವಿಡ್ ಸೋಂಕಿಗೆ ಬಲಿಯಾದಂತಾಗಿದೆ.

ಚೀನಾದಲ್ಲಿ ಶನಿವಾರ 2,157 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸೋಂಕಿತರ ಸಂಖ್ಯೆ ಶುಕ್ರವಾರಕ್ಕೆ ಹೋಲಿಸಿದರೆ ಕೊಂಚ ಇಳಿದಿದೆ. ಶುಕ್ರವಾರ 2388 ಕೇಸುಗಳು ದಾಖಲಾಗಿದ್ದವು. ಮಾರ್ಚ್ ಆರಂಭದಿಂದ ಈವರೆಗೆ ದೇಶದಲ್ಲಿ ಒಟ್ಟು 29,000 ಸಕ್ರಿಯ ಸೋಂಕಿತರು ಇದ್ದಾರೆ. ಬಹುತೇಕ ಸೋಂಕುಗಳು ಜಿಲಿನ್ ಪ್ರಾಂತ್ಯದಲ್ಲೇ ಕಂಡು ಬಂದಿದ್ದರಿಂದ ಇಲ್ಲಿ ಪ್ರಯಾಣದ ಮೇಲೆ ನಿರ್ಬಂಧ ಹೇರಲಾಗಿದೆ.



## ಕೊರಿಯಾದಲ್ಲಿ 3.81 ಲಕ್ಷ ಕೇಸು

ಇದೇ ವೇಳೆ, ದ. ಕೊರಿಯಾದಲ್ಲಿ ಶನಿವಾರ 3.81 ಲಕ್ಷ ಹೊಸ ಪ್ರಕರಣಗಳು ದಾಖಲಾಗಿವೆ ಹಾಗೂ 319 ಸೋಂಕಿತರು ಬಲಿಯಾಗಿದ್ದಾರೆ. ಹೊಸ ಪ್ರಕರಣಗಳ ಸಂಖ್ಯೆ ಶುಕ್ರವಾರಕ್ಕೆ ಹೋಲಿಸಿದರೆ ಕೊಂಚ ತಗ್ಗಿದೆ. ದೇಶದಲ್ಲಿ ಶುಕ್ರವಾರ 4 ಲಕ್ಷ ಹಾಗೂ ಗುರುವಾರ 6 ಲಕ್ಷ ಕೋವಿಡ್ ಕೇಸುಗಳು ದಾಖಲಾಗಿದ್ದವು.

## ಬರೀ 2075 ಕೋವಿಡ್ ಕೇಸು: ಸಾರ್ವಕಾಲಿಕ ಕನಿಷ್ಠ

**ನವದೆಹಲಿ:** ಒಂದೆಡೆ ವಿದೇಶಗಳಲ್ಲಿ ಕೋವಿಡ್ ಅಬ್ಬರ ಹೆಚ್ಚುತ್ತಿದ್ದರೆ, ಇನ್ನೊಂದೆಡೆ ದೇಶದಲ್ಲಿ ಕೋವಿಡ್ ಪ್ರಕರಣ ಮತ್ತಷ್ಟು ಇಳಿಕೆಯಾಗಿದೆ. ಶನಿವಾರ 2,075 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದು ದೇಶದಲ್ಲಿ ಮೊದಲ ಅಲೆ ಅಬ್ಬರ ಆರಂಭವಾದ ನಂತರದ ಸಾರ್ವಕಾಲಿಕ ಕನಿಷ್ಠವಾಗಿದೆ. 71 ಸೋಂಕಿತರು ಸಾವಿಗೀಡಾಗಿದ್ದಾರೆ. ಸಕ್ರಿಯ ಕೇಸು ಸಂಖ್ಯೆ 27,802ಕ್ಕೆ ಇಳಿಕೆಯಾಗಿದೆ.

## ಕೋವಿಡ್ ಅಂತ್ಯ ಇನ್ನೂ ದೂರವಿದೆ: ಡಬ್ಲ್ಯುಎಚ್‌ಒ

**ಜಿನೀವಾ:** ಕೋವಿಡ್ ಸಾಂಕ್ರಾಮಿಕದ ಅಂತ್ಯ ಇನ್ನೂ ದೂರದಲ್ಲಿದೆ. ನಾವಿನ್ನೂ ಈ ಪಿಡುಗಿನ ನಡು ಭಾಗದಲ್ಲಿದ್ದೇವೆ. ಹೀಗಾಗಿ ಎಲ್ಲಾ ದೇಶಗಳು ಎಚ್ಚರ ವಹಿಸುವುದು ಅಗತ್ಯ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮತ್ತೊಮ್ಮೆ ಎಚ್ಚರಿಕೆ ನೀಡಿದೆ. ಈ ಕುರಿತು ಹೇಳಿಕೆ ನೀಡಿರುವ ಸಂಸ್ಥೆ ವಕ್ತಾರೆ ಮಾರ್ಗರೆಟ್ ಹ್ಯಾರಿಸ್, 'ನಾವಿನ್ನೂ ಕೋವಿಡ್ ಸಾಂಕ್ರಾಮಿಕದ ಅಂತ್ಯದಿಂದ ಬಹು ದೂರದಲ್ಲಿದ್ದೇವೆ. ಕಳೆದ ವಾರ ವಿಶ್ವದಾದ್ಯಂತ ಹೊಸ ಪ್ರಕರಣಗಳಲ್ಲಿ ಏರಿಕೆಯಾಗಿರುವುದೇ ಇದಕ್ಕೆ ಸಾಕ್ಷಿ' ಎಂದು ಎಚ್ಚರಿಕೆ ನೀಡಿದ್ದಾರೆ. ಸತತ 1 ತಿಂಗಳ ಇಳಿಕೆ ಬಳಿಕ ಕಳೆದ ವಾರ ವಿಶ್ವದಲ್ಲಿ ಹೊಸ ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿದೆ.

# 8 ವಲಯಗಳಲ್ಲೂ ಕಮಾಂಡ್ ಸೆಂಟರ್

## ಕೇಂದ್ರ ಕಚೇರಿ ಮಾದರಿಯಲ್ಲಿ ಉಪಶಾಖೆ | 14 ಇಲಾಖೆ ದೂರು ಪರಿಹಾರಕ್ಕೆ ಕ್ರಮ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜಧಾನಿಯಲ್ಲಿ ಸಾರ್ವಜನಿಕ ಸೇವೆ ನೀಡುವ 14 ಇಲಾಖೆಗಳ ದೂರು ನಿರ್ವಹಣೆ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಅನುಕೂಲ ಆಗುವಂತೆ ಸ್ಥಾಪಿಸಲಾಗುತ್ತಿರುವ ಇಂಟಿಗ್ರೇಟೆಡ್ ಕಂಟ್ರೋಲ್ ಮತ್ತು ಕಮಾಂಡ್ ಸೆಂಟರ್ (ಐಸಿಸಿಸಿ) ವಿಭಾಗಗಳನ್ನು ಪಾಲಿಕೆಯ 8 ವಲಯಗಳಿಗೂ ವಿಸ್ತರಣೆ ಮಾಡಲು ಬಿಬಿಎಂಪಿ ಮುಂದಾಗಿದೆ.

ನಗರದಲ್ಲಿ ಬಿಬಿಎಂಪಿಯ ಆಸ್ತಿ ತೆರಿಗೆ, ರಸ್ತೆಗಳ ನಿರ್ವಹಣೆ, ಪಾದಚಾರಿ ಮಾರ್ಗಗಳ ದುರಸ್ತಿ, ಕೆರೆಗಳು, ಪಶುಪಾಲನೆ, ತೋಟಗಾರಿಕೆ, ಆರೋಗ್ಯ ಮತ್ತು ಕಲ್ಯಾಣ ವಿಭಾಗಗಳ ಸೇವೆಗಳನ್ನು ಹಾಗೂ ಬಿಎಂಟಿಸಿ, ಮೆಟ್ರೋ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿ ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ವೇದಿಕೆಯಡಿ ಒದಗಿಸಲಾಗುತ್ತಿದೆ. ಇದರ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲವಾಗುವ ಮಾದರಿಯಲ್ಲಿ ಬೆಂಗಳೂರು ಸ್ಮಾರ್ಟ್ ಸಿಟಿ ಲಿ. ಸಂಸ್ಥೆಯು ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಐಸಿಸಿಸಿ ಸ್ಥಾಪಿಸುತ್ತಿದೆ. ಆದರೆ, ಕೇಂದ್ರ ಕಚೇರಿಯಿಂದಲೇ ರಾಜಧಾನಿಯ ದೂರುಗಳನ್ನು ನಿರ್ವಹಣೆ ಮಾಡುವುದು ಕಷ್ಟವಾಗ ಬಹುದೆಂದು ಈಗ ಪಾಲಿಕೆ 8 ವಲಯ ಕಚೇರಿಗಳಲ್ಲಿಯೂ ಐಸಿಸಿಸಿ ಉಪಕೇಂದ್ರಗಳನ್ನು ತೆರೆಯಲು ನಿರ್ಧರಿಸಿದೆ.

**ತಲಾ 20 ಜನರ ತಂಡ ಕಾರ್ಯ:** ಪಾಲಿಕೆ ಕೇಂದ್ರ ಕಚೇರಿಯಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಇಂಟಿಗ್ರೇಟೆಡ್ ಕಂಟ್ರೋಲ್ ಮತ್ತು ಕಮಾಂಡ್ ಸೆಂಟರ್ ನಿರ್ಮಾಣ ಮಾಡಲಾಗುತ್ತಿದೆ. ಇಲ್ಲಿ 25 ಕಂಪ್ಯೂಟರ್ ಹಾಗೂ 1 ಬೃಹತ್ ಸ್ಮಾರ್ಟ್ ಪರದೆಯನ್ನು ಅಳವಡಿಸಲಾಗುತ್ತದೆ. ಎಲ್ಲ ಇಲಾಖೆಗಳ ಸಿಸಿ ಕ್ಯಾಮರಾ ದೃಶ್ಯಗಳನ್ನು ಇಲ್ಲಿ ನೇರವಾಗಿ ವೀಕ್ಷಣೆ ಮಾಡಬಹುದು.

ಇದೇ ಮಾದರಿಯಲ್ಲಿ ಪಾಲಿಕೆಯ ವಲಯಗಳಲ್ಲಿ ಉಪ ಕೇಂದ್ರಗಳಲ್ಲಿ ತಲಾ 20 ಜನರನ್ನು ಒಳಗೊಂಡ ತಂಡದ ಕಾರ್ಯ ನಿರ್ವಹಣೆಗೆ ವ್ಯವಸ್ಥೆ ಮಾಡಲಾಗುತ್ತಿದೆ. ಎಲ್ಲರಿಗೂ ತಲಾ 1 ಕಂಪ್ಯೂಟರ್ ಮತ್ತು ಮಾಹಿತಿಯ ವೀಕ್ಷಣೆಗೆ ಸ್ಮಾರ್ಟ್ ಪರದೆಯನ್ನು ಅಳವಡಿಸಲಾಗುತ್ತಿದೆ.

ಪ್ರತಿ ಐಸಿಸಿಸಿ ಕೇಂದ್ರಗಳಲ್ಲಿ ದಿನದ 24 ಗಂಟೆಯೂ ಕಾರ್ಯನಿರ್ವಹಿಸಲು 3 ಪಾಳಿಯಲ್ಲಿ ಸಿಬ್ಬಂದಿ ನಿಯೋಜನೆ ಮಾಡಲಾಗುತ್ತಿದೆ.





ಪಾಲಿಕೆ ವ್ಯಾಪ್ತಿ ದೊಡ್ಡದಿರುವ ಹಿನ್ನೆಲೆಯಲ್ಲಿ ಸ್ಥಳೀಯವಾಗಿಯೇ ಸೇವೆಗಳ ನಿರ್ವಹಣೆ ಮತ್ತು ದೂರುಗಳ ಪರಿಹಾರಕ್ಕೆ ಅನುಕೂಲವಾಗುವಂತೆ ವಲಯ ಕಚೇರಿಗಳಲ್ಲಿಯೂ ಐಸಿಸಿಸಿ ಸ್ಥಾಪಿಸಲಾಗುತ್ತಿದೆ. ಈ ಬಗ್ಗೆ ಬೆಂಗಳೂರು ಸ್ಮಾರ್ಟ್ ಸಿಟಿ ಲಿ.ಗೆ ಸೂಚಿಸಲಾಗಿದ್ದು, 100 ದಿನಗಳಲ್ಲಿ ಕಂಟ್ರೋಲ್ ರೂಮ್‌ಗಳು ಸೇವೆಗೆ ಸಿದ್ಧಗೊಳ್ಳಲಿವೆ.

| ಡಾ.ಕೆ.ವಿ. ತ್ರಿಲೋಕ್‌ಚಂದ್ರ
ಬಿಬಿಎಂಪಿ ಐಟಿ ವಿಭಾಗ ವಿಶೇಷ ಆಯುಕ್ತ

### ಪಾಲಿಕೆ ಪೋರ್ಟಲ್ ಜೋಡಣೆ

ಪಾಲಿಕೆಯ ಅಂದಾಜು 7 ಸೇವೆಗಳನ್ನು ಒಳಗೊಂಡಂತೆ ಒಂದು ಹೊಸ ಏಕೀಕೃತ ನಾಗರಿಕ ಸಂಪರ್ಕ (ಯುಸಿಸಿ) ಪೋರ್ಟಲ್ ಸಿದ್ಧಪಡಿ ಸಲಾಗಿದೆ. ಆಸ್ತಿ ತೆರಿಗೆ, ಜನನ ಮತ್ತು ಮರಣ ಪ್ರಮಾಣ ಪತ್ರ, ವ್ಯಾಪಾರ ಪರವಾನಗಿ, ಕಟ್ಟಡ ನಿರ್ಮಾಣ ಪರವಾನಗಿ, ವಿದ್ಯುತ್ ಚಿತಾಗಾರ ಮತ್ತು ಕುಂದುಕೊರತೆ ಸೇರಿ ಹಲವು ವಿಭಾಗಗಳ ನಿರ್ವಹಣೆ ಮಾಡಲಾಗುತ್ತಿದೆ. ಇದಕ್ಕೆ ಸಂಂಧಪಟ್ಟಂತೆ ಯಾವುದೇ ದೂರುಗಳಿದ್ದರೂ ಬಿಬಿಎಂಪಿ ಸಹಾಯ 2.0 ಆ್ಯಪ್ ಮೂಲಕ ದಾಖಲಿಸಬಹುದು. ದೂರು ದಾಖಲಿಸಲು ಮತ್ತು ಪರಿಹಾರ ಕಾರ್ಯಗಳ ಬಗ್ಗೆ ಮೇಲ್ವಿಚಾರಣೆ ಮಾಡಲು ಇಂಟಿಗ್ರೇಟೆಡ್ ಕಂಟ್ರೋಲ್ ಮತ್ತು ಕಮಾಂಡ್ ಸೆಂಟರ್‌ಗೆ ಯುಸಿಸಿ ಪೋರ್ಟಲ್ ಮತ್ತು ಸಹಾಯ 2.0 ಆ್ಯಪ್ ಜೋಡಣೆ ಮಾಡ ಲಾಗುತ್ತಿದೆ ಎಂದು ಪಾಲಿಕೆ ವಿಶೇಷ ಆಯುಕ್ತ ಡಾ. ಕೆ.ವಿ. ತ್ರಿಲೋಕ್‌ಚಂದ್ರ ತಿಳಿಸಿದ್ದಾರೆ.

# ನೋಂದಣಿಗೆ ಅವಧಿ ವಿಸ್ತರಣೆ

**ಬೆಂಗಳೂರು:** ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ರಾಷ್ಟ್ರಮಟ್ಟದಲ್ಲಿ ನಡೆಸಲಾಗುತ್ತಿರುವ ರಸಪ್ರಶ್ನೆ, ಘೋಷವಾಕ್ಯ, ಗಾಯನ, ಚಿತ್ರೀಕರಣ ಹಾಗೂ ಪೋಸ್ಟರ್ ವಿನ್ಯಾಸ ಸ್ಪರ್ಧೆಗೆ ನೋಂದಣಿ ಅವಕಾಶವನ್ನು 31ರವರೆಗೆ ವಿಸ್ತರಿಸಲಾಗಿದೆ.

» **ಮತದಾರರ ಜಾಗೃತಿ ಸ್ಪರ್ಧೆ**

ಸ್ವೀಪ್ ಕಾರ್ಯಕ್ರಮದ ಅಡಿಯಲ್ಲಿ 'ನನ್ನ ಮತ ನನ್ನ ಭವಿಷ್ಯ- ಒಂದು ಮತದ ಶಕ್ತಿ' ಎಂಬ ವಿಷಯದ ಬಗ್ಗೆ ಜಾಗೃತಿ ಸ್ಪರ್ಧೆ ಆಯೋಜಿಸಲಾಗುತ್ತಿದೆ. 5 ಬಗೆಯ ಸ್ಪರ್ಧೆಗಳಲ್ಲಿ ಯಾವುದೇ ಸಂಸ್ಥೆ, ವೃತ್ತಿಪರ ಹಾಗೂ ಹವ್ಯಾಸಿ ಎಂಬ 3 ಪ್ರತ್ಯೇಕ ವರ್ಗಗಳಲ್ಲಿ ಭಾಗವಹಿಸಬಹುದು. ವಿಜೇತರಿಗೆ 15 ಸಾವಿರ ರೂ.ಗಳಿಂದ 2 ಲಕ್ಷ ರೂ.ವರೆಗೆ ನಗದು ಬಹುಮಾನ ನೀಡಲಾಗುತ್ತದೆ. ಮತದಾರರ ಜಾಗೃತಿ ಸ್ಪರ್ಧೆಯಲ್ಲಿ ಭಾಗವಹಿಸಲು (http://ecisveep.nic.in/contest) ವೆಬ್‌ಸೈಟ್‌ನಲ್ಲಿ ನಿಯಮಗಳನ್ನು ತಿಳಿದುಕೊಂಡು, ಅರ್ಹರು voter-contest@eci.gov.inಗೆ ಹೆಸರು ಮತ್ತು ಸ್ಪರ್ಧಿಸುವ ವರ್ಗದ ವಿವರ ಕಳುಹಿಸಬಹುದು.

# ಆಸ್ತಿ ತೆರಿಗೆ ವಸೂಲಿಗೆ ಜಪ್ತಿ ನೋಟಿಸ್ ಬಂದೀತು ಎಚ್ಚರ!

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳೆದ 5 ವರ್ಷಗಳಿಂದ 46,797 ಆಸ್ತಿಗಳ ಮಾಲೀಕರು 330 ಕೋಟಿ ರೂ. ತೆರಿಗೆ ಪಾವತಿಸದೆ ಬಾಕಿ ಉಳಿಸಿಕೊಂಡಿರುವುದನ್ನು ಪಾಲಿಕೆ ಗುರುತಿಸಿದೆ. ಹಲವು ಬಾರಿ ನೋಟಿಸ್ ಜಾರಿ ಮಾಡಿದ್ದರೂ ವಸೂಲಿ ಮಾತ್ರ ಸಾಧ್ಯವಾಗುತ್ತಿಲ್ಲ.

ನಗರದಲ್ಲಿ ಅಂದಾಜು 18 ಲಕ್ಷ ಆಸ್ತಿಗಳಿಂದ ಬಿಬಿಎಂಪಿ ಪ್ರತಿವರ್ಷ ಆಸ್ತಿ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಒಟ್ಟು 4 ಸಾವಿರ ಕೋಟಿ ರೂ.ಗಿಂತ ಅಧಿಕ ಆಸ್ತಿ ತೆರಿಗೆ ಹಣ ಬರುವ ಸಾಧ್ಯತೆ ಇದ್ದರೂ ಕೆಲವರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಳ್ಳುತ್ತಿದ್ದಾರೆ. ಹೀಗಾಗಿ, ಪ್ರತಿವರ್ಷ ಬಜೆಟ್‌ನಲ್ಲಿ ನಿಗದಿ ಮಾಡಿದ ಆಸ್ತಿ ತೆರಿಗೆ ಸಂಗ್ರಹ ಗುರಿಯಲ್ಲಿ ಶೇ. 70ಕ್ಕಿಂತ ಕಡಿಮೆ ಸಾಧನೆ ಆಗುತ್ತದೆ. ಹೀಗೆ ಕಳೆದ 5 ವರ್ಷಗಳಿಂದ 46,797 ಆಸ್ತಿ ಮಾಲೀಕರು ತೆರಿಗೆ ಪಾವತಿಸದೇ 330 ಕೋಟಿ ರೂ. ಬಾಕಿ ಉಳಿಸಿಕೊಂಡಿರುವವರ ಪಟ್ಟಿಯನ್ನು ಪಾಲಿಕೆ ಕಂದಾಯ ವಿಭಾಗದ ಸಿಬ್ಬಂದಿ ಸಿದ್ಧಪಡಿಸಿದ್ದಾರೆ. ಈಗಾಗಲೇ ಕೆಎಂಸಿ ಕಾಯ್ದೆ ಅನ್ವಯ ನೋಟಿಸ್ ನೀಡಲಾಗಿದ್ದರೂ ತೆರಿಗೆ ಪಾವತಿಗೆ ಮಾಲೀಕರು ನಿರ್ಲಕ್ಷ್ಯ ವಹಿಸಿದ್ದು, ಶೀಘ್ರ ಜಪ್ತಿ ವಾರೆಂಟ್ ಜಾರಿಗೊಳಿಸಲು ಮುಂದಾಗಿದ್ದಾರೆ.

**ಬಾಕಿ ಉಳಿಯಲು ಕಾರಣವೇನು?:** ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದಲ್ಲಿ ಹಳೆಯ ಬಾಕಿಯನ್ನು ಪಾವತಿಸಿದ ನಂತರವೇ ಹೊಸ ಅಥವಾ ಪ್ರಸ್ತುತ ವರ್ಷದ ಆಸ್ತಿ ತೆರಿಗೆ ಪಾವತಿಸಲು ಸಾಧ್ಯವಾಗುತ್ತದೆ. ಆದರೆ, ಐದು ವರ್ಷಗಳಿಗಿಂತ ಅಧಿಕ ವರ್ಷಗಳ ಕಾಲ ಬಾಕಿ ಉಳಿಸಿಕೊಂಡ ಆಸ್ತಿಗಳ ಮಾಲೀಕರಲ್ಲಿ ಶೇ. 50ಕ್ಕೂ ಅಧಿಕ ಪ್ರಕರಣಗಳು ಕಟ್ಟಡ ನಿರ್ಮಿಸಿ, ಬೇರೊಬ್ಬರಿಗೆ ಮಾರಾಟ ಮಾಡಿದವು ಆಗಿವೆ. ಕಟ್ಟಡ ನಿರ್ಮಿಸಿದ ಮೂಲ ಮಾಲೀಕರು ಆಸ್ತಿ ತೆರಿಗೆ ಪಾವತಿಸದೇ ಕಟ್ಟಡ ಅಥವಾ ಫ್ಲ್ಯಾಟ್ ಮಾರಾಟ ಮಾಡಿದ್ದಲ್ಲಿ ಖರೀದಿ ಮಾಡಿದ ವ್ಯಕ್ತಿಗಳು ಹಿಂದಿನ ಬಾಕಿ ಪಾವತಿಗೆ ಹಿಂದೇಟು ಹಾಕುತ್ತಿದ್ದಾರೆ. ಇದೇ ಮಾದರಿಯ ಹಲವು ಪ್ರಕರಣಗಳು ನ್ಯಾಯಾಲಯದಲ್ಲಿ ವ್ಯಾಜ್ಯ ಎದುರಿಸುತ್ತಿದ್ದು, ತೆರಿಗೆ ಪಾವತಿ ಸಾಧ್ಯವಾಗುತ್ತಿಲ್ಲ. ಮನೆ ಅಥವಾ ಕಟ್ಟಡ ಖರೀದಿಗೂ ಮುನ್ನ ಆಸ್ತಿ ತೆರಿಗೆ ಪಾವತಿ ಬಗ್ಗೆಯೂ ನಿಗಾ ವಹಿಸುವುದು ಅಗತ್ಯವಾಗಿರುತ್ತದೆ ಎಂದು ಪಾಲಿಕೆ ಕಂದಾಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

### ಆಸ್ತಿ ತೆರಿಗೆ ಸಂಗ್ರಹ

| ವರ್ಷ | ಕೋಟಿ ರೂ.ಗಳಲ್ಲಿ |
|---|---|
| 2019-20 | 2686.26 |
| 2020-21 | 2781.45 |
| 2021-22 (ಮಾ.10ವರೆಗೆ) | 2852.31 |

» 46 ಸಾವಿರ ಮಾಲೀಕರಿಂದ 330 ಕೋಟಿ ರೂ. ಬಾಕಿ

# ಮಳೆಗಾಲಕ್ಕೂ ಮುನ್ನ ರಸ್ತೆ ಕಾಮಗಾರಿ ಪೂರ್ಣಗೊಳಿಸಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮಹದೇವಪುರ ವಲಯದ ಬೆಳ್ಳಂದೂರು ವಾರ್ಡ್‌ನಲ್ಲಿರುವ 11 ಹಳ್ಳಿಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಮಳೆಗಾಲಕ್ಕೂ ಮೊದಲೇ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದ್ದಾರೆ.

ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯಲ್ಲಿ ನಡೆಸಲಾಗುತ್ತಿರುವ ಅಂಡರ್‌ಪಾಸ್ ಕಾಮಗಾರಿ ಮತ್ತು ಮಹದೇವಪುರ ವಲಯದಲ್ಲಿ ಗ್ರಾಮೀಣ ಪ್ರದೇಶಗಳ ರಸ್ತೆ ಅಭಿವೃದ್ಧಿ ಕಾಮಗಾರಿ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೆಳ್ಳಂದೂರು ವಾರ್ಡ್‌ನಲ್ಲಿ ಕಾವೇರಿ ಕುಡಿಯುವ ನೀರಿನ ಸಂಪರ್ಕಕ್ಕೆ ಕೊಳವೆ ಅಳವಡಿಕೆ ಪೂರ್ಣಗೊಂಡ ಸ್ಥಳಗಳಲ್ಲಿನ ರಸ್ತೆಗಳ ಅಭಿವೃದ್ಧಿ ಪಾಲಿಕೆ ಕಾರ್ಯವಾಗಿದೆ. ಈಗಾಗಲೇ ಅನುದಾನ ಹಂಚಿಕೆಯಾಗಿದ್ದು, ಏ.30ರ ಒಳಗಾಗಿ ರಸ್ತೆಗಳು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದರು.

ಮಹದೇವಪುರ ವಲಯ ಮುಖ್ಯ ಇಂಜಿನಿಯರ್ ಪರಮೇಶ್ವರಯ್ಯ ಪ್ರತಿಕ್ರಿಯಿಸಿ, ನೀರಿನ ಸಂಪರ್ಕದ ಕೊಳವೆ ಅಳವಡಿಕೆ ಕಾಮಗಾರಿ ಪೂರ್ಣಗೊಂಡ ರಸ್ತೆಗಳ ಅಭಿವೃದ್ಧಿ ಕಾರ್ಯ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ಚರಂಡಿ, ಕಲ್ವರ್ಟ್‌ಗಳು, ಚರಂಡಿಗಳಿಗೆ ಸ್ಲ್ಯಾಬ್‌ಗಳ ಅಳವಡಿಕೆ, ಪಾದಚಾರಿ ಮಾರ್ಗ ಅಭಿವೃದ್ಧಿ, ರಸ್ತೆಗಳಿಗೆ ಡಾಂಬರೀಕರಣ ಕೆಲಸ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

ಹಳೆಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆಯಡಿ ವಿಂಡ್ ಟನಲ್ ರಸ್ತೆಯ ಜಂಕ್ಷನ್ ಬಳಿ ಕೆಳಸೇತುವೆ ನಿರ್ಮಾಣದ ಕಾಮಗಾರಿಯಲ್ಲಿ ಒಂದು ಕಡೆ ರಿಟೇನಿಂಗ್ ವಾಲ್ ನಿರ್ಮಿಸಲಾಗಿದೆ. ಇನ್ನೊಂದು ಭಾಗದಲ್ಲಿ ವಾಹನ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ರಿಟೇನಿಂಗ್ ವಾಲ್ ನಿರ್ಮಿಸಿ ಪ್ರಿಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಸಿ 6 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಇನ್ನೊಂದೆಡೆ, ಸುರಂಜನ್ ದಾಸ್ ಜಂಕ್ಷನ್ ಬಳಿಯ ಕೆಳಸೇತುವೆ ಕಾಮಗಾರಿಯಲ್ಲಿ ಎರಡೂ ಬದಿ ರಿಟೇನಿಂಗ್ ವಾಲ್ ನಿರ್ಮಿಸಲಾಗಿದೆ. ಶೀಘ್ರ ಪ್ರಿಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಸಿ ಜುಲೈ ವೇಳೆಗೆ ವಾಹನ ಸಂಚಾರಕ್ಕೆ ಮುಕ್ತಗೊಳಿಸಲು ಸೂಚಿಸಿದರು.


ವಿಜಯವಾಣಿ ಚಿತ್ರ

ಬೆಳ್ಳಂದೂರು ವಾರ್ಡ್‌ಗೆ ಶನಿವಾರ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ



# ಬಜೆಟ್ ಗಾತ್ರ ಮೀರದು 9,000 ಕೋಟಿ ರೂಪಾಯಿ

**ಬೆಂಗಳೂರು** ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ (ಎಫ್‌ಆರ್‌ಬಿಎಂ)- 2021ರ ಅನ್ವಯ ಆದಾಯ ಮತ್ತು ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ 9 ಸಾವಿರ ಕೋಟಿ ರೂ. ಮೀರದಂತೆ 2022-23ನೇ ಸಾಲಿನ ಬಜೆಟ್ ಮಂಡನೆಗೆ ಪಾಲಿಕೆ ಸಿದ್ಧತೆ ಮಾಡಿಕೊಂಡಿದೆ.

ಜನಪ್ರತಿನಿಧಿಗಳಿಲ್ಲದೆ ಸತತ ಎರಡನೇ ವರ್ಷವೂ ಪಾಲಿಕೆ ಆಡಳಿತಾಧಿಕಾರಿ ನೇತೃತ್ವದಲ್ಲಿ ಮಂಡಿಸಲಾಗುತ್ತಿದೆ. ಮಾಸಾಂತ್ಯದಲ್ಲಿ ಆಯವ್ಯಯ ಮಂಡನೆ ಆಗಲಿದೆ. ಎರಡು ತಿಂಗಳಿಂದ ಪಾಲಿಕೆಯ 23 ವಿವಿಧ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಿ ಆದಾಯ ಕ್ರೋಡೀಕರಣ ಮತ್ತು ವೆಚ್ಚದ ಬಗ್ಗೆ ಲೆಕ್ಕಾಚಾರ ಮಾಡಿ ಕರಡು ಪ್ರತಿ ಸಿದ್ಧಪಡಿಸಲಾಗಿತ್ತು. ಆದರೆ, ಪಾಲಿಕೆಯಲ್ಲಿ ಕಡ್ಡಾಯವಾಗಿ ಆರ್ಥಿಕ ಶಿಸ್ತು ನಿಟ್ಟಿನಲ್ಲಿ ಸರ್ಕಾರ ಇತ್ತೀಚೆಗೆ ಸರ್ಕಾರ ಬಿಬಿಎಂಪಿ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ-2021ರ ಕಾಯ್ದೆ ಜಾರಿಗೊಳಿಸಿದೆ. ಈ ಕಾಯ್ದೆಯ ನಿಯಮಗಳನ್ನು 2022- 23ನೇ ಸಾಲಿನ ಬಜೆಟ್‌ನಲ್ಲಿಯೇ ಅಳವಡಿಕೆ ಮಾಡಿಕೊಳ್ಳುವಂತೆ ಸೂಸಿಚಿರುವುದರಿಂದ ಈವರೆಗೆ ಸಿದ್ಧಪಡಿಸಿದ್ದ ಕರಡು ಪ್ರತಿಯಲ್ಲಿ ವೆಚ್ಚ ತಗ್ಗಿಸುವುದು ಸೇರಿ ಕೆಲವು ಬದಲಾವಣೆ ಮಾಡಲು ಪಾಲಿಕೆ ಮುಂದಾಗಿದೆ.



ಕಳೆದ ಮೂರು ಆರ್ಥಿಕ ಸಾಲಿನಲ್ಲಿ 9,500 ಕೋಟಿ ರೂ. ಮೀರಿದ ಆಯವ್ಯಯ ಮಂಡನೆ ಮಾಡಲಾಗಿತ್ತು. ಆದರೆ, ಪ್ರಸ್ತುತ ವರ್ಷ ವಿತ್ತೀಯ ಹೊಣೆಗಾರಿಕೆ ಕಾಯ್ದೆ ಜಾರಿ ಉದ್ದೇಶದಿಂದ ಆದಾಯದ ಮೂಲ ಇಲ್ಲದಿದ್ದರೂ ಕೊರತೆ ಬಜೆಟ್ ಮಂಡಿಸುವ ಮೂಲಕ ವೆಚ್ಚ ತೋರಿಸುವುದಕ್ಕೆ ಕಡಿವಾಣ ಹಾಕಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯಸರ್ಕಾರದ ಅನುದಾನ ಹಾಗೂ ಪಾಲಿಕೆಗೆ ಎಲ್ಲ ಮೂಲಗಳಿಂದ ಬರುವ ಆದಾಯವನ್ನು ಪರಿಗಣಿಸಿದರೂ 10 ಸಾವಿರ ಕೋಟಿ ರೂ. ಆದಾಯ ಮೂಲ ತೋರಿಸಲಾಗುತ್ತಿಲ್ಲ. ಹೀಗಾಗಿ, ಈ ವರ್ಷ 9 ಸಾವಿರ ಕೋಟಿ ರೂ. ಮೀರದಂತೆ ಬಜೆಟ್ ಮಂಡನೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪಾಲಿಕೆಗೆ ಆಸ್ತಿ ತೆರಿಗೆಯಿಂದ 4 ಸಾವಿರ ಕೋಟಿ ರೂ., ಕಟ್ಟಡ ಪರವಾನಗಿ, ಉದ್ಯಮ ಪರವಾನಗಿ, ಕಟ್ಟಡಗಳ ಬಾಡಿಗೆ ಇತ್ಯಾದಿ ಸೇರಿ 1,200 ಕೋಟಿ ರೂ. ತೆರಿಗೆಯೇತರ ಆದಾಯ ಸಂಗ್ರಹಣೆ ಗುರಿ ಹೊಂದಲಾಗಿತ್ತು. ಆದರೆ, ಈ ವರ್ಷ ತೆರಿಗೆಯೇತರ ಆದಾಯವನ್ನು 1,600 ಕೋಟಿ ರೂ.ಗೆ ಹೆಚ್ಚಳ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ.

## ದಕ್ಷಿಣ ಕೊರಿಯಾದಲ್ಲೂ ಸೋಂಕು ಏರಿಕೆ | ಸಕ್ರಿಯ ಪ್ರಕರಣದಲ್ಲಿ ಹಾಂಕಾಂಗ್ ದಾಖಲೆ

# ಚೀನಾದಲ್ಲಿ ಕರೊನಾ ಅಬ್ಬರ, ವರ್ಷದ ಬಳಿಕ ಇಬ್ಬರ ಬಲಿ

**ಬೀಜಿಂಗ್/ನವದೆಹಲಿ:** ಜಗತ್ತಿನ ಇತರ ಭಾಗಗಳಲ್ಲಿ ಕರೊನಾ ಸೋಂಕು ಇಳಿಮುಖವಾಗುತ್ತಿದ್ದು ಚೀನಾದಲ್ಲಿ ಅದರ ಪ್ರಮಾಣ ಏರಿಕೆಯಾಗುತ್ತಿದೆ. ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಕರೊನಾ ಸೋಂಕಿಗೆ ಇಬ್ಬರು ಬಲಿಯಾಗಿದ್ದು, ಸಾಂಕ್ರಾಮಿಕತೆ ಉಲ್ಬಣದ ಆತಂಕ ಇನ್ನಷ್ಟು ಹೆಚ್ಚಾಗಿದೆ.

ಒಮಿಕ್ರಾನ್ ಪ್ರಭೇದದಿಂದ ದೇಶದಲ್ಲಿ ಸೋಂಕಿನ ಹಾವಳಿ ಹೆಚ್ಚಾಗಿದ್ದು ಇಬ್ಬರ ಸಾವಿನ ಪ್ರಕರಣ ಕಳವಳ ಮೂಡಿಸಿದೆ. ಚೀನಾದ ಮುಖ್ಯಭೂಮಿಯಲ್ಲಿ 2021ರ ಜನವರಿ ನಂತರ ವರದಿಯಾದ ಮೊದಲ ಸಾವಿನ ಪ್ರಕರಣ ಇದಾಗಿದ್ದು ಇದರೊಂದಿಗೆ ದೇಶದಲ್ಲಿ ಮೃತರ ಸಂಖ್ಯೆ 4,638ಕ್ಕೆ ಏರಿದೆ. ದಕ್ಷಿಣ ಕೊರಿಯಾದಲ್ಲಿ ಕೂಡ ಪ್ರಕರಣಗಳಲ್ಲಿ ಏರಿಕೆ ಕಂಡು ಬಂದಿದೆ. ಅಲ್ಲಿ ಒಂದೇ ದಿನ ಆರು ಲಕ್ಷಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗಿರುವುದು ಭಾರಿ ಕಳವಳಕ್ಕೆ ಕಾರಣವಾಗಿದೆ. ಈಶಾನ್ಯ ಪ್ರಾಂತ್ಯ ಜಿಲಿನ್‌ನಲ್ಲಿ ಈ ಎರಡು ಸಾವುಗಳು ಸಂಭವಿಸಿವೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ (ಎನ್‌ಎಚ್‌ಸಿ) ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರಾಂತ್ಯದಲ್ಲೇ ಹೆಚ್ಚು ಪ್ರಕರಣಗಳು ಕಾಣಿಸಿಕೊಂಡಿದ್ದರಿಂದ ಹಲವು ನಗರಗಳಲ್ಲಿ ಲಾಕ್‌ಡೌನ್ ಮತ್ತು ಕಟ್ಟು ನಿಟ್ಟಿನ ನಿರ್ಬಂಧಗಳನ್ನು ವಿಧಿಸಲಾಗಿದೆ. 65 ಹಾಗೂ 87 ವರ್ಷದ ಪುರುಷರು ಬಲಿಯಾಗಿದ್ದು ವಯಸ್ಸಲ್ಲದೆ ಇತರ ಆರೋಗ್ಯ ಸಮಸ್ಯೆಗಳನ್ನೂ ಅವರು ಎದುರಿಸುತ್ತಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.




### ನಾಲ್ಕನೇ ಅಲೆ ಸಂಭವ

**ಭಾ**ರತದಲ್ಲಿ ಕರೊನಾ ಮಹಾಮಾರಿಯ ನಾಲ್ಕನೇ ಅಲೆ ಅಪ್ಪಳಿಸುವ ಸಾಧ್ಯತೆಯಿದೆ. ಆದರೆ ಅದು ಇನ್ನೂ ಕಾಲಿಟ್ಟಿಲ್ಲ ಎಂದು ತಜ್ಞರು ಹೇಳಿದ್ದಾರೆ. 2021ರ ಡಿಸೆಂಬರ್‌ನಿಂದ ಈ ವರ್ಷದ ಫೆಬ್ರವರಿ ನಡುವಿನ ಮೂರನೇ ಅಲೆಯಿಂದ ಉಂಟಾಗಿರುವ ರೋಗನಿರೋಧಕತೆ (ಇಮ್ಯುನಿಟಿ) ಹಾಗೂ ಬಹುತೇಕ ರಾಜ್ಯಗಳಲ್ಲಿ ಲಸಿಕೆ ಅಭಿಯಾನ ನಡೆದಿರುವುದು ನಾಲ್ಕನೇ ಅಲೆ ಉಂಟಾಗದಿರಲು ಕಾರಣ ಎಂದು ಮಹಾರಾಷ್ಟ್ರದ ಆರೋಗ್ಯ ಸೇವೆಗಳ ಮಾಜಿ ಮಹಾ ನಿರ್ದೇಶಕ ಸುಭಾಷ್ ಸಾಲುಂಕೆ ಅಭಿಪ್ರಾಯ ಪಟ್ಟಿದ್ದಾರೆ.

### ಡಬ್ಲ್ಯುಎಚ್‌ಒ ವಿವರಣೆ

ಒಮಿಕ್ರಾನ್ ರೂಪಾಂತರಿಯ ಬಿಎ.2 ಎಂಬ 'ಗುಪ್ತ' ಉಪ-ತಳಿ ಜಗತ್ತಿನ ಹಲವೆಡೆ ಕೋವಿಡ್-19 ಸೋಂಕು ಹೆಚ್ಚಲು ಕಾರಣ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಭಿಪ್ರಾಯಪಟ್ಟಿದೆ.

ಹಲವು ದೇಶಗಳಲ್ಲಿ ಸೋಂಕಿನ ಸಂಖ್ಯೆ ಹೆಚ್ಚುತ್ತಿರುವುದರಿಂದ ಕರೊನಾ ಮಹಾಮಾರಿ ಇನ್ನೂ ಕೊನೆಗೊಂಡಿಲ್ಲ ಎನ್ನುವುದು ಸ್ಪಷ್ಟವಾಗಿದೆ.

| ಮಾರ್ಗರೆಟ್ ಹ್ಯಾರಿಸ್
ಡಬ್ಲ್ಯುಎಚ್‌ಒ ವಕ್ತಾರೆ

### ಭಾರತದಲ್ಲಿ ಕರೊನಾ

| | |
|---|---|
| ಹೊಸ ಪ್ರಕರಣ | 2,075 |
| ಒಟ್ಟು ಕೇಸ್ | 4,30,06,080 |
| ಮರಣ | 71 |
| ಒಟ್ಟು ಸಾವು | 5,16,352 |
| ಪಾಸಿಟಿವಿಟಿ | ಶೇ.0.56 |

### 10 ಲಕ್ಷ ಸಕ್ರಿಯ ಪ್ರಕರಣ

ಹಾಂಕಾಂಗ್‌ನಲ್ಲಿ ಕೋವಿಡ್-19 ಸೋಂಕು ಅಬ್ಬರಿಸುತ್ತಿದ್ದು ಸೋಂಕಿತರ ಒಟ್ಟು ಸಂಖ್ಯೆ 10 ಲಕ್ಷ ದಾಟಿದೆ. ಶುಕ್ರವಾರ 20,079 ಜನರಲ್ಲಿ ಸೋಂಕು ದೃಢಪಟ್ಟಿದ್ದು ಕರೊನಾ ಸೋಂಕು ತಗಲಿದವರ ಒಟ್ಟು ಸಂಖ್ಯೆ 10,16,944ಕ್ಕೆ ಏರಿದೆ. ಹಾಂಕಾಂಗ್‌ನಲ್ಲಿ ಸೋಂಕಿಗೆ ಸುಮಾರು 5,200 ಜನರು ಬಲಿಯಾಗಿದ್ದಾರೆ, ಇದು ಮುಖ್ಯಭೂಮಿ ಚೀನಾದಲ್ಲಿ ಕೋವಿಡ್-19ರಿಂದ ಮೃತಪಟ್ಟವರಿಗಿಂತಲೂ ಹೆಚ್ಚಾಗಿದೆ. ಚೀನಾದಲ್ಲಿ 4,636 ಮಂದಿ ಮರಣ ಹೊಂದಿದ್ದಾರೆ. ಚೀನಾದಲ್ಲಿ ಸೋಂಕಿತರ ಒಟ್ಟು ಸಂಖ್ಯೆ 1,26,234 ಆಗಿದೆ. ಸುಮಾರು 74 ಲಕ್ಷ ಜನಸಂಖ್ಯೆಯ ಹಾಂಕಾಂಗ್ ಒಮಿಕ್ರಾನ್ ಪ್ರಭೇದದಿಂದ ತತ್ತರಿಸುತ್ತಿದೆ. ಆಸ್ಪತ್ರೆಗಳು ಸೋಂಕಿತರಿಂದ ತುಂಬಿ ತುಳುಕುತ್ತಿದ್ದು ಆರೋಗ್ಯ ವ್ಯವಸ್ಥೆ ತೀವ್ರ ಒತ್ತಡಕ್ಕೆ ಒಳಗಾಗಿದೆ.

### 4,051 ಹೊಸ ಕೇಸ್

**ಚೀ**ನಾದಲ್ಲಿ ಶನಿವಾರ ಕರೊನಾ ಸೋಂಕಿನ 4,051 ಹೊಸ ಕೇಸ್‌ಗಳು ದೃಢಪಟ್ಟಿವೆ. ಈ ಪೈಕಿ ಅರ್ಧಕ್ಕಿಂತ ಅಧಿಕ ಕೇಸ್‌ಗಳು ಜಿಲಿನ್ ಒಂದರಿಂದಲೇ ವರದಿಯಾಗಿವೆ. ಶುಕ್ರವಾರ 4,365 ಪ್ರಕರಣಗಳು ವರದಿಯಾಗಿದ್ದವು.



# ಕೊರೊನಾ 4ನೇ ಅಲೆ ಭೀತಿ ಇಲ್ಲ!

## ಭಾರತದಲ್ಲಿ ನಾಲ್ಕನೇ ಅಲೆ ಬಂದರೂ ಹೆಚ್ಚು ಗಂಭೀರವಾಗಿರದು: ತಜ್ಞರು

**ನವದೆಹಲಿ:** ದಕ್ಷಿಣ ಕೊರಿಯಾದಲ್ಲಿ ಒಂದೇ ದಿನದಲ್ಲಿ 6 ಲಕ್ಷಕ್ಕೂ ಅಧಿಕ ಪ್ರಕರಣ ಪತ್ತೆಯಾಗುವಂತೆ ಮಾಡಿರುವ ಒಮಿಕ್ರಾನ್‌ನ ಬಿಎ2 ಉಪರೂಪಾಂತರಿಯ ಉಪಟಳ ಭಾರತದಲ್ಲಿ ಸದ್ಯಕ್ಕಂತೂ ಇಲ್ಲ ಎಂದು ತಜ್ಞರು ಹೇಳಿದ್ದಾರೆ. ಅಕಸ್ಮಾತ್ತಾಗಿ ಭಾರತದಲ್ಲಿ ಒಮಿಕ್ರಾನ್‌ನ ಬಿಎ2 ಉಪರೂಪಾಂತರಿಯ ಅಲೆ ಕಾಣಿಸಿಕೊಂಡರೂ ಅದು ಹೆಚ್ಚು ಗಂಭೀರವಾಗಿರದು ಎಂಬ ಅಭಯವನ್ನು ನೀಡಿದ್ದಾರೆ.

ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲೂ ಕೊರೊನಾ 4ನೇ ಅಲೆಯ ಭೀತಿ ಸದ್ಯಕ್ಕಿಲ್ಲ ಆದರೂ, ಜನರು ಮುನ್ನೆಚ್ಚರಿಕಾ ಕ್ರಮಗಳನ್ನು ಮರೆಯಬಾರದು. ಎಂದು ರಾಜ್ಯ ಆರೋಗ್ಯ ಸೇವೆಗಳ ಮಾಜಿ ಮಹಾನಿರ್ದೇಶಕರು ಮತ್ತು ರಾಜ್ಯ ಸರ್ಕಾರಗಳ ತಾಂತ್ರಿಕ ಸಲಹೆಗಾರರು ಆಗಿರುವ ಡಾ. ಸುಭಾಷ್ ಸಲುಂಖೆ ತಿಳಿಸಿದ್ದಾರೆ. ದೇಶದಲ್ಲಿ ಬಹುತೇಕರು ಲಸಿಕೆ ಪಡೆದಿರುವುದರಿಂದ ಹೆಚ್ಚಿನ ಪ್ರಮಾಣದ ಪ್ರತಿರೋಧಕ ಶಕ್ತಿ ಎಲ್ಲರಲ್ಲೂ ಆವರಿಸಿದೆ. ಹಾಗಾಗಿ, 4ನೇ ಅಲೆ ಬಂದರೂ ಅದರಿಂದ ಸಮಾಜದ ಮೇಲೆ ಗಂಭೀರ ಪರಿಣಾಮ ಆಗದು ಎಂದು ಹೇಳಿದ್ದಾರೆ.

ಒಮಿಕ್ರಾನ್‌ನ ಬಿಎ1 ಮತ್ತು ಬಿಎ2 ರೂಪಾಂತರಿಗಳು ಕೊರೊನಾ 3ನೇ ಅಲೆಯ ಆರಂಭದಿಂದಲೇ ದೇಶದಲ್ಲಿ ಕಾಣಿಸಿಕೊಂಡಿದೆ ಎಂದು ಮಹಾರಾಷ್ಟ್ರದ ಕೊರೊನಾ ಟಾಸ್ಕ್ ಫೋರ್ಸ್‌ನ ಸದಸ್ಯ ಡಾ. ಶಶಾಂಕ್ ಜೋಶಿ ತಿಳಿಸಿದ್ದಾರೆ.

**ದೇಶದಲ್ಲಿ 2 ಸಾವಿರ ಪ್ರಕರಣ:** ದೇಶದಲ್ಲಿ ಶುಕ್ರವಾರ ಬೆಳಗ್ಗೆಯಿಂದ ಶನಿವಾರ ಬೆಳಗ್ಗೆವರೆಗೆ 2,075 ಕೊರೊನಾ ಪ್ರಕರಣಗಳು ಪತ್ತೆಯಾಗಿವೆ. ಈ ಮೂಲಕ ಒಟ್ಟಾರೆ ಪ್ರಕರಣಗಳ ಸಂಖ್ಯೆ 4,30,06,080ಕ್ಕೆ ಏರಿಕೆಯಾಗಿದೆ. 24 ಗಂಟೆಗಳಲ್ಲಿ 71 ಸೋಂಕಿತರು ಸಾವನ್ನಪ್ಪಿದ್ದು, ಒಟ್ಟು ಸಾವಿನ ಸಂಖ್ಯೆ 5,16,352ಕ್ಕೆ ಹೆಚ್ಚಿದೆ. ಸದ್ಯ 27,802 ಪ್ರಕರಣಗಳು ಸಕ್ರಿಯವಾಗಿವೆ. ಅದರಲ್ಲಿ ಕೇರಳ ಅತಿ ಹೆಚ್ಚಿನ ಸಂಖ್ಯೆಯ(7,289) ಸಕ್ರಿಯ ಪ್ರಕರಣಗಳನ್ನು ಹೊಂದಿದೆ. ಹಾಗೆಯೇ ಮಹಾರಾಷ್ಟ್ರದಲ್ಲಿ 5,684, ಮಿಝೋರಾಂನಲ್ಲಿ 2,127 ಮತ್ತು ಕರ್ನಾಟಕದಲ್ಲಿ 2055 ಸಕ್ರಿಯ ಪ್ರಕರಣಗಳಿವೆ. ಒಟ್ಟು 15ಕ್ಕೂ ಹೆಚ್ಚು ರಾಜ್ಯಗಳಲ್ಲಿ 500ಕ್ಕೂ ಹೆಚ್ಚು ಸಕ್ರಿಯ ಪ್ರಕರಣಗಳಿವೆ.



ಸೂರತ್‌ನ ಶಾಲೆಯೊಂದರಲ್ಲಿ ಶನಿವಾರ 12-14 ವರ್ಷದ ವಿದ್ಯಾರ್ಥಿಗಳಿಗೆ ಲಸಿಕೆ ನೀಡುತ್ತಿರುವುದು.

### ಎರಡು ಸಾವಿರ ಕೇಸ್!

ಶನಿವಾರ ಚೀನಾದಲ್ಲಿ 2,157 ಪ್ರಕರಣಗಳು ವರದಿಯಾಗಿವೆ. ಮುಖ್ಯವಾಗಿ ಜಿಲಿನ್ ಪ್ರಾಂತ್ಯದಲ್ಲಿ ಹೆಚ್ಚು ಸೋಂಕು ಕಂಡುಬಂದಿದೆ. ಸೋಂಕು ಸಾಮುದಾಯಿಕವಾಗಿ ಹರಡುತ್ತಿದೆ. ಈ ನಡುವೆ ಚೀನಾ ತನ್ನ ಕೊರೊನಾ ಶೂನ್ಯ ನೀತಿಯನ್ನು ಮುಂದುವರಿಸಿದೆ. ಅಂತಾರಾಷ್ಟ್ರೀಯ ಪ್ರಯಾಣಗಳನ್ನು ನಿರ್ಬಂಧಿಸಿದೆ. ಹೊರಜಗತ್ತಿನೊಂದಿಗೆ ಸಂಪರ್ಕಗಳನ್ನು ಬಹುತೇಕ ಕಡಿಮೆಗೊಳಿಸಿದೆ. ಇದರಿಂದ ಅಲ್ಲಿ ವ್ಯಾಸಂಗ ಮಾಡುತ್ತಿರುವ 23,000 ಭಾರತೀಯ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ.

### ಹಾಂಕಾಂಗ್‌ನಲ್ಲಿ ಲಕ್ಷ ದಾಟಿದ ಸೋಂಕು!

ಚೀನಾ ಅಧೀನದಲ್ಲಿರುವ ಹಾಂಕಾಂಗ್ ಪರಿಸ್ಥಿತಿ ಇನ್ನಷ್ಟು ಹಾಳಾಗಿದೆ. ಅಲ್ಲಿ ಕೊರೊನಾ ಸೋಂಕಿತರ ಪ್ರಮಾಣ ಒಟ್ಟಾರೆ 10 ಲಕ್ಷ ದಾಟಿದೆ. ಹಾಗೆಯೇ ಸಾವಿನ ಪ್ರಮಾಣವಂತೂ ಇಡೀ ಚೀನಾದಲ್ಲಿ ಸಂಭವಿಸಿದ ಸಾವನ್ನು ಮೀರಿಸಿದೆ. ಶುಕ್ರವಾರ ಹಾಂಕಾಂಗ್‌ನಲ್ಲಿ 20,079 ಹೊಸ ಪ್ರಕರಣಗಳು ಪತ್ತೆಯಾಗಿವೆ. ಇದರಿಂದ ಒಟ್ಟು ಸೋಂಕಿನ ಪ್ರಮಾಣ 10,16,944ಕ್ಕೆ ಮುಟ್ಟಿದೆ. ಹಾಗೆಯೇ ಈ ವರ್ಷ ಫೆ.9ರ ನಂತರ ಚೀನಾದಲ್ಲಿ 5,200 ಮಂದಿ ಮೃತಪಟ್ಟಿದ್ದಾರೆ. ವಿಚಿತ್ರವೆಂದರೆ ಚೀನಾದಲ್ಲಿ ಕೊರೊನಾ ಶುರುವಾದ ನಂತರ ಬರೀ 4636 ಮಂದಿ ಮಾತ್ರ ಸತ್ತಿದ್ದಾರಂತೆ. ಈ ಲೆಕ್ಕದಲ್ಲಿ ಹಾಂಕಾಂಗ್, ಚೀನಾವನ್ನು ಕೆಲವೇ ತಿಂಗಳಲ್ಲಿ ಮೀರಿಸಿದೆ ಎಂದು ಬಿಂಬಿಸಲಾಗುತ್ತಿದೆ.

ಸದ್ಯ ಚೀನಾದಲ್ಲಿನ ಒಟ್ಟಾರೆ ಸೋಂಕಿನ ಪ್ರಮಾಣ 1,26,234 ಮಂದಿ ಮಾತ್ರ ಅಂತೆ. ಕೊರೊನಾ ಸೋಂಕು ತಗುಲಿದ್ದು ಖಾತ್ರಿಯಾಗಿದ್ದರೂ, ಅದರ ಲಕ್ಷಣಗಳು ಬಹಿರಂಗವಾಗಿ ಪ್ರಕಟವಾಗದಿರುವ ವ್ಯಕ್ತಿಗಳನ್ನು ಸೋಂಕಿತರ ಪಟ್ಟಿಯಲ್ಲಿ ಚೀನಾ ಸೇರಿಸುವುದಿಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕು.

# ರಸ್ತೆಗಳ ಪುನಶ್ಚೇತನಕ್ಕೆ ಗಡುವು

ಸಂ.ಕ.ಸಮಾಚಾರ, ಬೆಂಗಳೂರು

ನಗರದಲ್ಲಿ ಕೈಗೊಳ್ಳಲಾಗಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಏಪ್ರಿಲ್ ವೇಳೆಗೆ ಪೂರ್ಣಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

- ಏಪ್ರಿಲ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿ
- ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಿ

ಮಹದೇವಪುರ ವಲಯ ವ್ಯಾಪ್ತಿಯಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ತಪಾಸಣೆ ಮಾಡಿದ ಅವರು, ಮಳೆಗಾಲ ಸಮೀಪಿಸುತ್ತಿದೆ. ಇದರಿಂದ ಈಗಲೇ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಚುರುಕುಗೊಳಿಸಿ ಏಪ್ರಿಲ್ ಅಂತ್ಯದೊಳಗೆ ವಾಹನಗಳ ಸುಗಮಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸೂಚಿಸಿದರು.

ವಿಂಡ್‌ಟನಲ್ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಕೆಳಸೇತುವೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಎನ್.ಎ.ಎಲ್ ಮತ್ತು ಇಸ್ರೋ ಸಂಸ್ಥೆಗೆ ಸೇರಿದ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಒಂದು ಭಾಗದಲ್ಲಿ ಕೆಳಸೇತುವೆಯ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಳಿಸಲಾಗಿರುತ್ತದೆ. ರಸ್ತೆಯ



ಇನ್ನೊಂದು ಭಾಗದಲ್ಲಿ ಬದಲಿ ವಾಹನ ಸಂಚಾರಕ್ಕೆ ಅನುಮತಿ ಪಡೆದು ಸಂಚಾರಿ ಮಾರ್ಗ ಬದಲಾವಣೆಯಾದ ಕೂಡಲೆ ರಿಟೈನಿಂಗ್ ವಾಲ್ ಕಾಮಗಾರಿ ಮತ್ತು ಫ್ರೀ ಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಸಿ ಕಾಮಗಾರಿಯನ್ನು ಮುಂದಿನ 6 ತಿಂಗಳೊಳಗಾಗಿ ಪೂರ್ಣಗೊಳಿಸಲು ಮುಖ್ಯ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು.

ಸುರಂಜನ್ ದಾಸ್ ಜಂಕ್ಷನ್‌ಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ಅವರು, ಈಗಾಗಲೇ ಮಾರತಹಳ್ಳಿ ಕಡೆಯಿಂದ ಬೆಂಗಳೂರಿಗೆ ಬರುವ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಮತ್ತೊಂದು ಭಾಗದಲ್ಲಿ ಕೆಲವು ಮರಗಳ ಸ್ಥಳಾಂತರ ಪೂರ್ಣಗೊಂಡಿರುತ್ತದೆ. ಎರಡೂ ಬದಿಯ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದ್ದು ಫ್ರೀ ಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಕೆಯನ್ನು ಜುಲೈ-2022ರೊಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಮಹದೇವಪುರ ವಿಭಾಗಕ್ಕೆ 31 ಹಳ್ಳಿಗಳು ಬರಲಿದ್ದು ಬೆಳ್ಳಂದೂರು ವಾರ್ಡ್ 28 ಚದರ ಕಿ.ಮೀ ಇದ್ದು, ಸದರಿ ವಾರ್ಡ್ ನಲ್ಲಿ 11 ಹಳ್ಳಿಗಳು ಬರಲಿವೆ. ಈ ಪೈಕಿ 110 ಹಳ್ಳಿಗಳ ರಸ್ತೆ ಪುನಶ್ಚೇತನ ಮಾಡುವ ಸಲುವಾಗಿ ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದು ಬೆಳ್ಳಂದೂರು ವಾರ್ಡ್‌ನಲ್ಲಿ ಬರುವ 11 ಹಳ್ಳಿಗಳ ರಸ್ತೆ ಪುನಶ್ಚೇತನಕ್ಕಾಗಿ 18 ಪ್ಯಾಕೇಜ್‌ಗಳಲ್ಲಿ 210 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಕೂಡಲೇ ಎಲ್ಲ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು. ಈ ವೇಳೆ ಮಹದೇವಪುರ ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಮತ್ತಿತರರಿದ್ದರು.

> “ಎಲ್ಲಾ ರಸ್ತೆಗಳ ಪುನಶ್ಚೇತನ ಕಾರ್ಯ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಡ್ರೈನೇಜ್, ಕಲ್ವರ್ಟ್‌ಗಳು, ರಸ್ತೆ ಬದಿ ಚರಂಡಿಗಳಿಗೆ ಸ್ಲ್ಯಾಬ್‌ಗಳ ಅಳವಡಿಕೆ, ಪಾದಚಾರಿ ಮಾರ್ಗ, ರಸ್ತೆಗಳಿಗೆ ಡಾಂಬರೀಕರಣ ಕೆಲಸ ನಡೆಯುತ್ತಿದೆ.
>
> ■ ಪರಮೇಶ ರಯ್ಯ | ಮುಖ್ಯ ಎಂಜಿನಿಯರ್

# ಇಂದಿರಾ ಕ್ಯಾಂಟೀನ್ ಮುಚ್ಚುವ ಸ್ಥಿತಿಗೆ..

## ಗುತ್ತಿಗೆ ಸಂಸ್ಥೆಗಳಿಗೆ ಕೋಟ್ಯಂತರ ರೂ. ಬಾಕಿ | ಕೆಲಸಗಾರರ ಕೊರತೆ-ಸಿಗದ ಪೌಷ್ಠಿಕ ಆಹಾರ

ಸಂ.ಕ. ಸಮಾಚಾರ, ಬೆಂಗಳೂರು

ಬಡವರಿಗೆ, ಶ್ರಮಿಕರಿಗಾಗಿ ಸಿದ್ದರಾಮಯ್ಯ ಸರ್ಕಾರದ ವೇಳೆ ಜಾರಿಗೆ ತಂದ ಇಂದಿರಾ ಕ್ಯಾಂಟೀನ್ ಈಗ ಮುಚ್ಚುವ ಸ್ಥಿತಿಯಲ್ಲಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಗುತ್ತಿಗೆ ಸಂಸ್ಥೆಗಳಿಗೆ ಕೋಟ್ಯಂತರ ರೂಪಾಯಿ ಬಿಲ್‌ಪಾವತಿ ಬಾಕಿ ಉಳಿದಿದೆ. ಇದರಿಂದ ನಿರ್ವಹಣೆ ಮಾಡಲಾಗದೆ ಈಗ ಮುಚ್ಚುವಂತಹ ವಾತಾವರಣ ನಿರ್ಮಾಣವಾಗಿದೆ.

**ಟ್ಯಾಂಕರ್ ಮಾಲೀಕರಿಗೂ ಪಾವತಿಸದ ಹಣ**

ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಡುಬಡವರು, ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಆಟೋ, ಟ್ಯಾಕ್ಸಿ ಚಾಲಕರಿಗೆ ಬೆಳಗ್ಗೆ 5 ರೂ., ಮಧ್ಯಾಹ್ನ ಹಾಗೂ ರಾತ್ರಿ 10ರೂ.ಗೆ ರಿಯಾಯಿತಿ ದರದಲ್ಲಿ ಊಟ, ತಿಂಡಿ ನೀಡಲಾಗುತ್ತಿದೆ.

ಈ ಕ್ಯಾಂಟೀನ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಗೆ ಕಳೆದ ಹತ್ತು ತಿಂಗಳಿನಿಂದ 22 ಕೋಟಿ ರೂ. ಬಾಕಿ ಉಳಿಸಿಕೊಳ್ಳಲಾಗಿದೆ. ಕೋಟ್ಯಂತರ ರೂ. ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ಕ್ಯಾಂಟೀನ್‌ಗಳನ್ನು ಮುಚ್ಚಲು ಗುತ್ತಿಗೆ ಸಂಸ್ಥೆಗಳು ಚಿಂತನೆ ನಡೆಸಿವೆ. ಗುತ್ತಿಗೆದಾರರು ಒಂದೊಮ್ಮೆ ಬಡವರ ಹಸಿವು ನೀಗಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚಿದರೆ, ಸಾವಿರಾರು ಮಂದಿಗೆ ತೊಂದರೆಯಾಗಲಿದೆ.

ಈ ಕುರಿತು ಪ್ರತಿಕ್ರಿಯಿಸಿದ ಗುತ್ತಿಗೆದಾರರೊಬ್ಬರು, ಸಂಸ್ಥೆಗೆ 10



ತಿಂಗಳಿನಿಂದ 22 ಕೋಟಿ ಹಣ ಬರಬೇಕಿದೆ. ಅಲ್ಲದೇ ಕಳೆದ ವರ್ಷದ ಪೌರಕಾರ್ಮಿಕರ ನಾಲ್ಕು ಕೋಟಿ ರೂ. ಬಿಲ್ ಬಾಕಿ ಇದೆ. ಹೀಗೆ, ಬಿಲ್ ಪಾವತಿ ಮಾಡದಿದ್ದರೆ ಬಾಗಿಲು ಮುಚ್ಚಬೇಕಾಗುತ್ತದೆ ಎಂದರು.

ಇಂದಿರಾ ಕ್ಯಾಂಟೀನ್‌ಗಳಲ್ಲಿ ಸುಮಾರು 900 ಮಂದಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಸರಿಯಾದ ಕಾಲಕ್ಕೆ ವೇತನ ನೀಡಲಾಗುತ್ತಿಲ್ಲ. ಇದರಿಂದ ಬೇಸರಗೊಂಡು ಅನೇಕ ಕಾರ್ಮಿಕರು ಕೆಲಸ ಬಿಟ್ಟುಹೋಗುತ್ತಿದ್ದಾರೆ. ಹೊಸಬರನ್ನು ಕರೆದುಕೊಂಡು ಬಂದರೂ ಒಂದೇ ತಿಂಗಳಿಗೆ ಕೆಲಸ ಬಿಡುತ್ತಿದ್ದಾರೆ. ಹೀಗಾದರೆ ನಾವು ಹೇಗೆ ನಿರ್ವಹಣೆ ಮಾಡುವುದು ಎಂದು ಗುತ್ತಿಗೆದಾರರು ಪ್ರಶ್ನೆ ಮಾಡಿದರು.

### ತಗ್ಗಿದ ಗ್ರಾಹಕರ ಸಂಖ್ಯೆ

ದಿನೇದಿನೇ ಕ್ಯಾಂಟೀನ್‌ಗಳಲ್ಲಿ ಉಪಾಹಾರ ಸೇವಿಸುವವರ ಸಂಖ್ಯೆ ಕಡಿಮೆಯಾಗಿದೆ. ಕೆಲವೊಂದು ಕ್ಯಾಂಟೀನ್‌ಗಳಲ್ಲಿ ಬೆಳಗ್ಗೆ 200, ಮಧ್ಯಾಹ್ನ 100 ಮತ್ತು ರಾತ್ರಿ 50 ಮಂದಿಯಷ್ಟೇ ಆಹಾರ ಸೇವಿಸುತ್ತಿದ್ದಾರೆ. ಕೊರೊನಾ ಭೀತಿಯಿಂದಾಗಿ ಹಲವು ಕ್ಯಾಂಟೀನ್‌ಗಳತ್ತ ಜನ ಸುಳಿಯುತ್ತಿಲ್ಲ. ಹೀಗಾಗಿ, ಹಲವು ಕ್ಯಾಂಟೀನ್‌ಗಳು ಗ್ರಾಹಕರಿಲ್ಲದೆ ಭಣಗುಡುತ್ತಿವೆ. ಪಾಲಿಕೆಯಿಂದ ಬಿಲ್ ಪಾವತಿಯಾಗದ ಹಿನ್ನೆಲೆಯಲ್ಲಿ ಗುತ್ತಿಗೆ ಸಂಸ್ಥೆಗಳು ದಿನಸಿ, ತರಕಾರಿ ಪೂರೈಸುತ್ತಿದ್ದವರಿಗೆ ಲಕ್ಷಾಂತರ ರೂ. ಬಾಕಿ ಉಳಿಸಿಕೊಂಡಿವೆ. ಇದರಿಂದ ಕ್ಯಾಂಟೀನ್‌ನಲ್ಲಿ ಈಗ ಪೌಷ್ಟಿಕ ಆಹಾರವೂ ಸಿಗುತ್ತಿಲ್ಲ. ಗುಣಮಟ್ಟವೂ ಇಲ್ಲ ಎಂಬ ಆರೋಪವೂ ಇದೆ.

### ನೀರಿನ ಸಂಪರ್ಕ ಕಡಿತ

ಇಂದಿರಾ ಕ್ಯಾಂಟೀನ್‌ಗೆ ಕೆಲವು ಕಡೆ ಜಲಮಂಡಳಿಯಿಂದ ನೀರಿನ ಸಂಪರ್ಕ ಪಡೆದುಕೊಳ್ಳಲಾಗಿದೆ. ಕೆಲವು ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆಯಾಗುತ್ತಿತ್ತು. ಆದರೆ, ಜಲಮಂಡಳಿಗೆ ಕೋಟ್ಯಂತರ ರೂ. ಶುಲ್ಕ ಬಾಕಿ ಉಳಿಸಿಕೊಂಡಿವೆ. ಹಾಗಾಗಿ, ಜಲಮಂಡಳಿಯು ಅಡುಗೆ ಮನೆ ಹಾಗೂ ಕ್ಯಾಂಟೀನ್‌ಗಳಿಗೆ ನೀರು, ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಿದೆ. ಆದ್ದರಿಂದ ಗುತ್ತಿಗೆ ಸಂಸ್ಥೆಗಳು ಖಾಸಗಿ ಟ್ಯಾಂಕರ್‌ಗಳಿಂದ ನೀರು ಖರೀದಿಸುತ್ತಿವೆಯಾದರೂ ಟ್ಯಾಂಕರ್ ಮಾಲೀಕರಿಗೆ ಬಾಕಿ ಉಳಿಸಿಕೊಂಡಿರುವುದರಿಂದ ಅವರೂ ಕೂಡಾ ನೀರು ಪೂರೈಕೆಗೆ ಹಿಂದೇಟು ಹಾಕುತ್ತಿದ್ದಾರೆ.

ಹೊಸ ದಿಗಂತ

10

20 Mar 2022

## ವಿಂಡ್‌ಟನಲ್ ಜಂಕ್ಷನ್‌ಬಳಿ ಕೆಳಸೇತುವೆ ನಿರ್ಮಾಣ

# ಕೆಳಸೇತುವೆ ಕಾಮಗಾರಿಗೆ ಆರು ತಿಂಗಳು ಗಡುವು

**ಬೆಂಗಳೂರು:** ವಿಂಡ್‌ಟನಲ್ ಜಂಕ್ಷನ್‌ಬಳಿ ನಿರ್ಮಿಸುತ್ತಿರುವ ಕೆಳಸೇತುವೆ ಕಾಮಗಾರಿಯನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪಾಲಿಕೆ ವ್ಯಾಪ್ತಿಯ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆ ಅಡಿಯಲ್ಲಿ ಕೈಗೊಂಡಿರುವ ವಿಂಡ್‌ಟನಲ್ ರಸ್ತೆ ಜಂಕ್ಷನ್, ಸುರಂಜನ್ ದಾಸ್ ಜಂಕ್ಷನ್ ಕೆಳಸೇತುವೆ ಹಾಗೂ ಬೆಳ್ಳಂದೂರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಹನ್ನೊಂದು ಹಳ್ಳಿಗಳ ಪೈಕಿ ಹರಳೂರಿನಲ್ಲಿ ರಸ್ತೆ ಪುನಶ್ಚೇತನ ಕಾರ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ವಿಂಡ್‌ಟನಲ್ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಕೆಳಸೇತುವೆ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ಹೇಳಿದರು.

ಎನ್‌ಎಎಲ್ ಮತ್ತು ಇಸ್ರೋ ಸಂಸ್ಥೆಗೆ ಸೇರಿದ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಒಂದು ಭಾಗದಲ್ಲಿ ಕೆಳಸೇತುವೆಯ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಳಿಸಲಾಗಿದೆ. ರಸ್ತೆಯ ಇನ್ನೊಂದು ಭಾಗದಲ್ಲಿ ಬದಲಿ ವಾಹನ ಸಂಚಾರಕ್ಕೆ ಅನುಮತಿ ಪಡೆದು ಸಂಚಾರಿ ಮಾರ್ಗ ಬದಲಾವಣೆಯಾದ ಕೂಡಲೇ ರಿಟೈನಿಂಗ್ ವಾಲ್ ಕಾಮಗಾರಿ ಮತ್ತು ಫ್ರೀ ಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಸಿ ಕಾಮಗಾರಿಯನ್ನು ಮುಂದಿನ 6 ತಿಂಗಳೊಳಗಾಗಿ ಪೂರ್ಣಗೊಳಿಬೇಕು ಎಂದರು.

ಮಹದೇವಪುರ ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ವಲಯ ಮುಖ್ಯ ಇಂಜಿನಿಯರ್ ಪರಮೇಶ್ವರಯ್ಯ, ಯೋಜನಾ ವಿಭಾಗದ ಮುಖ್ಯ ಇಂಜಿನಿಯರ್ ಲೋಕೇಶ್, ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಮುಖ್ಯ ಇಂಜಿನಿಯರ್ ಪ್ರಹ್ಲಾದ್ ಇದ್ದರು.



ಮಳೆಗಾಲ ಪ್ರಾರಂಭವಾಗುವುದಕ್ಕೂ ಮುನ್ನ ಏಪ್ರಿಲ್ ಅಂತ್ಯದೊಳಗಾಗಿ ಎಲ್ಲಾ ರಸ್ತೆಗಳ ಪುನಶ್ಚೇತನ ಕಾರ್ಯ ಪೂರ್ಣಗೊಳಿಸಬೇಕು.

■ ಗೌರವ್ ಗುಪ್ತಾ , ಬಿಬಿಎಂಪಿ ಮುಖ್ಯ ಆಯುಕ್ತ

### ಜುಲೈನೊಳಗೆ ಕಾಮಗಾರಿ ಮುಗಿಸಿ

ಸುರಂಜನ್ ದಾಸ್ ಜಂಕ್ಷನ್‌ನಲ್ಲಿ ಈಗಾಗಲೇ ಮಾರತಹಳ್ಳಿ ಕಡೆಯಿಂದ ಬೆಂಗಳೂರಿಗೆ ಬರುವ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದೆ. ಮತ್ತೊಂದು ಭಾಗದಲ್ಲಿ ಕೆಲವು ಮರಗಳ ಸ್ಥಳಾಂತರ ಪೂರ್ಣಗೊಂಡಿದೆ. ಎರಡೂ ಬದಿಯ ರಿಟೈನಿಂಗ್ ವಾಲ್ ಕಾಮಗಾರಿ ಪೂರ್ಣಗೊಂಡಿದ್ದು, ಫ್ರೀ ಕಾಸ್ಟ್ ಬಾಕ್ಸ್ ಎಲಿಮೆಂಟ್ಸ್ ಅಳವಡಿಕೆಯನ್ನು ಜುಲೈ-2022 ರೊಳಗೆ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಅಧಿಕಾರಿಗಳಿಗೆ ಸೂಚಿಸಿದರು. ಮಹದೇವಪುರ ವಿಭಾಗಕ್ಕೆ 31 ಹಳ್ಳಿಗಳು ಬರಲಿದ್ದು, ಬೆಳ್ಳಂದೂರು ವಾರ್ಡ್ 28 ಚದರ ಕಿ.ಮೀ. ಇದ್ದು, ಸದರಿ ವಾರ್ಡ್ ನಲ್ಲಿ 11 ಹಳ್ಳಿಗಳು ಬರಲಿವೆ. ಈ ಪೈಕಿ 110 ಹಳ್ಳಿಗಳ ರಸ್ತೆ ಪುನಶ್ಚೇತನ ಮಾಡುವ ಸಲುವಾಗಿ ರಾಜ್ಯ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ಬೆಳ್ಳಂದೂರು ವಾರ್ಡ್‌ನಲ್ಲಿ ಬರುವ 11ಹಳ್ಳಿಗಳ ರಸ್ತೆ ಪುನಶ್ಚೇತನಕ್ಕಾಗಿ 18 ಪ್ಯಾಕೇಜ್‌ಗಳಲ್ಲಿ 210 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ.

# ಆರ್ಥಿಕವಾಗಿ ಹಿಂದುಳಿದವರಿಂದ ಅರ್ಜಿ ಆಹ್ವಾನ

ಬೆಂಗಳೂರು, ಮಾ.19: 2021-22ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ವಿಶೇಷ ಚೇತನರು ಹಾಗೂ ಸಾಮಾನ್ಯ ವರ್ಗ, ತೃತೀಯ ಲಿಂಗಿಗಳ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಾದ ಪಾಲಿಕೆಯ ಗ್ರೂಪ್-ಡಿ ನೌಕರರ/ಗ್ಯಾಂಗ್ ಮೆನ್‌ಗಳ ಮತ್ತು ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ, ಪಾಲಿಕೆ ಪೌರಕಾರ್ಮಿಕರಿಗೆ ಆರೋಗ್ಯ ಕಾರ್ಯಕ್ರಮ, ಖಾಯಂ/ಗುತ್ತಿಗೆ ಪೌರಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮಗಳು, ಪೌರಕಾರ್ಮಿಕರ ಕುಟುಂಬ ವರ್ಗದವರಿಗೆ ಸೌಲಭ್ಯಗಳನ್ನು ಒದಗಿಸುವುದು, ಪರಿಶಿಷ್ಟ ಜಾತಿ/ಪಂಗಡದ ಡಿ ಗ್ರೂಪ್ ನೌಕರರಿಗೆ ಸಹಾಯಧನ (ಖಾಯಂ ಚಾಲಕರು ಹಾಗೂ ಹೊರ ಗುತ್ತಿಗೆ ನೌಕರರು), ಪೌರಕಾರ್ಮಿಕರಿಗೆ ವೈಯಕ್ತಿಕ ಮನೆ ನಿರ್ಮಾಣ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಆರೋಗ್ಯ ಕಾರ್ಯಕ್ರಮ, ಪರಿಶಿಷ್ಟ ಜಾತಿ/ಪಂಗಡ ವರ್ಗದವರಿಗೆ ಶೈಕ್ಷಣಿಕ ಕಾರ್ಯಕ್ರಮ, ಪಾಲಿಕೆ ವ್ಯಾಪ್ತಿಯ ರುದ್ರಭೂಮಿ/ಸ್ಮಶಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪಂಗಡದವರಿಗೆ ಮನೆ ನಿರ್ಮಾಣ. ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ಆರೋಗ್ಯ ಕಾಯಕ್ರಮ, ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಸುವುದು, ವಿಶೇಷ ಚೇತನರು ಹಾಗೂ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಡಿ ದಿವ್ಯಾಂಗ ವ್ಯಕ್ತಿಗಳಿಗೆ ತ್ರಿಚಕ್ರವಾಹನ ವಿತರಣೆ, ವಿಶೇಷ ಚೇತನದವರಿಗೆ ಆರೋಗ್ಯ ಕಾರ್ಯಕ್ರಮ, ವ್ಯಾಯಮಕ್ಕೆ(Speech-theropy)ಕ್ಕಾಗಿ ಸಹಾಯಧನ, ವಿಶೇಷ ಚೇತನದವರಿಗೆ ಶೈಕ್ಷಣಿಕ ಕಾರ್ಯಕ್ರಮ, ವಿಶೇಷ ಚೇತನದವರಿಗೆ ಆರ್ಥಿಕ ಸಹಾಯ, ಆರ್ಥಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಸಹಾಯಧನ ನೀಡಲಾಗುವುದು.

ಅರ್ಜಿ ಸಲ್ಲಿಸಲು ಇಚ್ಛಿಸುವವರು ಪಾಲಿಕೆಯ ಅಂತರ್ಜಾಲವಾದ https://site.bbmp.gov.in/departmentwebsites/welfare/welfareactivities.html ಇಲ್ಲಿ ಅರ್ಜಿಯನ್ನು ಡೌನ್ಲೋಡ್ ಮಾಡಿಕೊಂಡು ಭರ್ತಿ ಮಾಡಿ ವಲಯದ ಕಚೇರಿಗೆ ಸಲ್ಲಿಸಬಹುದಾಗಿರುತ್ತದೆ. ಅಲ್ಲದೆ ವಲಯಗಳ ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ) ಕಚೇರಿಯಿಂದ ಅರ್ಜಿಯನ್ನು ಪಡೆದು ಪತ್ರಿಕಾ ಪ್ರಕಟಣೆ ದಿನಾಂಕದಿಂದ 30 ದಿನಗಳ ಒಳಗೆ ಭರ್ತಿ ಮಾಡಿ, ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕೇಂದ್ರ ಕಚೇರಿಯ ಇ-ಮೇಲ್ ವಿಳಾಸ: welfarebbmp@gmail.comಗೆ ಸಂಪರ್ಕಿಸುವುದು ಮತ್ತು ವಲಯದ ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ) ಕಚೇರಿಗೆ ಭೇಟಿ ಮಾಡಬಹುದಾಗಿದೆ ಎಂದು ಉಪ ಆಯುಕ್ತರು(ಕಲ್ಯಾಣ) ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ರಾಜ್ಯಾದ್ಯಂತ 173 ಮಂದಿಗೆ ಕೊರೋನ ದೃಢ

ಬೆಂಗಳೂರು, ಮಾ.19: ರಾಜ್ಯದಲ್ಲಿ ಶನಿವಾರ 173 ಹೊಸ ಕೊರೋನ ಪ್ರಕರಣಗಳು ದೃಢವಾಗಿವೆ. 2 ಮಂದಿ ಸೋಂಕಿಗೆ ಬಲಿಯಾಗಿದ್ದು, 153 ಜನರು ಗುಣಮುಖರಾಗಿದ್ದಾರೆ.

ರಾಜ್ಯದಲ್ಲಿ ಈಗಾಗಲೇ ಒಟ್ಟು ಸೋಂಕಿತರ ಸಂಖ್ಯೆ 39,44,605ಕ್ಕೆ ತಲುಪಿದೆ. ಇಲ್ಲಿಯವರೆಗೆ ಒಟ್ಟು ಸಾವಿನ ಸಂಖ್ಯೆ 40,035ಕ್ಕೆ ತಲುಪಿದೆ. ಒಟ್ಟು ಸಕ್ರಿಯ ಕೊರೋನ ಪ್ರಕರಣ ಸಂಖ್ಯೆ 2,031ಕ್ಕೆ ಏರಿಕೆಯಾಗಿದ್ದು, ಇವರೆಲ್ಲ ಸೋಂಕಿತರು ಆಸ್ಪತ್ರೆ, ಕೊರೋನ ಕೇರ್ ಸೆಂಟರ್ ಹಾಗೂ ಮನೆಗಳಲ್ಲಿ ಚಿಕಿತ್ಸೆ ಮತ್ತು ಆರೈಕೆಯಲ್ಲಿದ್ದಾರೆ.

ಇಬ್ಬರು ಸಾವು: ಬಳ್ಳಾರಿ 1, ಬೆಂಗಳೂರು ನಗರ 1 ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ ಹೊಸದಾಗಿ 173 ಪ್ರಕರಣಗಳು ದೃಢವಾಗಿದ್ದು, ಅದರಲ್ಲಿ ಬೆಳಗಾವಿ 5, ಬೆಂ.ನಗರ 138, ಚಿಕ್ಕಬಳ್ಳಾಪುರ 1, ಚಿಕ್ಕಮಗಳೂರು 1, ಚಿತ್ರದುರ್ಗ 8, ದ. ಕನ್ನಡ 2, ಧಾರವಾಡ 1, ಹಾವೇರಿ 1, ಕಲಬುರಗಿ 1, ಕೋಲಾರ 3, ಮಂಡ್ಯ 1, ಮೈಸೂರು 5, ಶಿವಮೊಗ್ಗ 2, ತುಮಕೂರು ಜಿಲ್ಲೆಯಲ್ಲಿ 2 ಪ್ರಕರಣ ಪತ್ತೆಯಾಗಿದೆ.

ಸಂಜೆವಾಣಿ 1982



# ಗುತ್ತಿಗೆ ಹಣ ಬಾಕಿ ಇಂದಿರಾ ಕ್ಯಾಂಟೀನ್ ಕಾರ್ಮಿಕರು ಅತಂತ್ರ

**ಬೆಂಗಳೂರು, ಮಾ.19-** ಬಿಬಿಎಂಪಿ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಗುತ್ತಿಗೆ ಸಂಸ್ಥೆಗಳಿಗೆ ಕೋಟ್ಯಂತರ ರೂಪಾಯಿ ಬಿಲ್ ಪಾವತಿ ಬಾಕಿ ಉಳಿದಿದ್ದು, ನೂರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಇಂದಿರಾ ಕ್ಯಾಂಟೀನ್‌ಗಳಲ್ಲಿ ಕಡು ಬಡವರು, ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಆಟೋ, ಟ್ಯಾಕ್ಸಿ ಚಾಲಕರಿಗೆ ರಿಯಾಯಿತಿ ದರದಲ್ಲಿ ಮೂರು ಹೊತ್ತು ಊಟ, ತಿಂಡಿ ನೀಡಲಾಗುತ್ತಿದೆ. ಈ ಕ್ಯಾಂಟೀನ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಗೆ ಕಳೆದ ಹತ್ತು ತಿಂಗಳಿನಿಂದ 22 ಕೋಟಿ ರೂ. ಬಾಕಿ ಉಳಿಸಿಕೊಳ್ಳಲಾಗಿದೆ.

ಕೋಟ್ಯಂತರ ರೂ. ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ಕ್ಯಾಂಟೀನ್‌ಗಳನ್ನು ಮುಚ್ಚಲು ಗುತ್ತಿಗೆ ಸಂಸ್ಥೆಗಳು ಚಿಂತನೆ ನಡೆಸಿವೆ. ಇದರಿಂದ ನೂರಾರು ಅಡುಗೆ ಸಿಬ್ಬಂದಿ, ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಮತ್ತೊಂದೆಡೆ, ಗುತ್ತಿಗೆದಾರರು ಒಂದೊಮ್ಮೆ ಬಡವರ ಹಸಿವು ನೀಗಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳನ್ನು

(7ನೇ ಪುಟ ನೋಡಿ)



# ಇಂದಿರಾ ಕ್ಯಾಂಟೀನ್

ಕ್ಯಾಂಟೀನ್‌ಗಳನ್ನು ಮುಚ್ಚಿದರೆ, ಸಾವಿರಾರು ಮಂದಿಗೆ ತೊಂದರೆಯಾಗಲಿದೆ.

ಈ ಕುರಿತು ಪ್ರತಿಕ್ರಿಯಿಸಿದ ಗುತ್ತಿಗೆದಾರರೊಬ್ಬರು, ಸಂಸ್ಥೆಗೆ 10 ತಿಂಗಳಿನಿಂದ 22 ಕೋಟಿ ರೂ. ಹಣ ಬರಬೇಕಿದೆ. ಅಲ್ಲದೇ ಕಳೆದ ವರ್ಷದ ಪೌರಕಾರ್ಮಿಕರ ನಾಲ್ಕು ಕೋಟಿ ರೂ. ಬಿಲ್ ಬಾಕಿ ಇದೆ. ಹೀಗೆ, ಬಿಲ್ ಪಾವತಿ ಮಾಡದಿದ್ದರೆ ಬಾಗಿಲು ಮುಚ್ಚಬೇಕಾಗುತ್ತದೆ ಎಂದರು.

ಅದೇ ರೀತಿ, 800–900 ಜನ ಕೆಲಸಕ್ಕೆ ಇದ್ದು, ವೇತನ ಕೊಡಲು ಸಾಧ್ಯವಾಗುತ್ತಿಲ್ಲ. ಹಲವರು ಕೆಲಸ ಬಿಟ್ಟು ಹೋಗುತ್ತಿದ್ದಾರೆ ಎಂದೂ ಬೇಸರ ವ್ಯಕ್ತಪಡಿಸಿದರು.

**ತಗ್ಗಿದ ಗ್ರಾಹಕರು:**

ದಿನೇ ದಿನೇ ಕ್ಯಾಂಟೀನ್‌ಗಳಲ್ಲಿ ಉಪಹಾರ ಸೇವಿಸುವವರ ಸಂ–ಖ್ಯೆ ಕಡಿಮೆಯಾಗಿದೆ. ಕೆಲವೊಂದು ಕ್ಯಾಂಟೀನ್‌ಗಳಲ್ಲಿ ಬೆಳಗ್ಗೆ 200, ಮಧ್ಯಾಹ್ನ 100 ಮತ್ತು ರಾತ್ರಿ 50 ಮಂದಿಯಷ್ಟೇ ಆಹಾರ ಸೇವಿಸುತ್ತಿದ್ದಾರೆ.

ಕೊರೋನಾ ಭೀತಿಯಿಂದಾಗಿ ಹಲವು ಕ್ಯಾಂಟೀನ್‌ಗಳತ್ತ ಜನ ಸುಳಿಯುತ್ತಿಲ್ಲ. ಹೀಗಾಗಿ, ಹಲವು ಕ್ಯಾಂಟೀನ್‌ಗಳು ಗ್ರಾಹಕರಿಲ್ಲದೆ ಭಣಗುಡುತ್ತಿವೆ. ಪಾಲಿಕೆಯಿಂದ ಬಿಲ್ ಪಾವತಿಯಾಗದ ಹಿನ್ನೆಲೆಯಲ್ಲಿ ಗುತ್ತಿಗೆ ಸಂಸ್ಥೆಗಳು ದಿನಸಿ, ತರಕಾರಿ ಪೂರೈಸುತ್ತಿದ್ದವರಿಗೆ ಲಕ್ಷಾಂತರ ರೂ. ಬಾಕಿ ಉಳಿಸಿಕೊಂಡಿವೆ.

ಅದೇ ರೀತಿ, ನೀರು, ಒಳಚರಂಡಿ ಸಂಪರ್ಕ ಕಡಿತ ಗುತ್ತಿಗೆ ಸಂಸ್ಥೆಗಳು ಜಲಮಂಡಳಿಗೆ ಕೋಟ್ಯಂತರ ರೂ. ಶುಲ್ಕ ಬಾಕಿ ಉಳಿಸಿಕೊಂಡಿವೆ. ಹಾಗಾಗಿ, ಜಲಮಂಡಳಿಯು ಅಡುಗೆ ಮನೆ ಹಾಗೂ ಕ್ಯಾಂಟೀನ್‌ಗಳಿಗೆ ನೀರು, ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಿದೆ. ಆದ್ದರಿಂದ ಗುತ್ತಿಗೆ ಸಂಸ್ಥೆಗಳು ಖಾಸಗಿ ಟ್ಯಾಂಕರ್‌ಗಳಿಂದ ನೀರು ಖರೀದಿಸುತ್ತಿರುವ ಅಂಶವೂ ಗೊತ್ತಾಗಿದೆ.

# ಹಲವು ದೇಶಗಳಲ್ಲಿ ಸೋಂಕು ಹೆಚ್ಚಳ



**ಮತ್ತೆ ಆತಂಕ**

ಬೀಜಿಂಗ್.ಮಾ19– ಚೀನಾ ಸೇರಿದಂತೆ ವಿಶ್ವದ ಹಲವು ದೇಶಗಳಲ್ಲಿ ಹೆಚ್ಚುತ್ತಿರುವ ಕರೋನಾ ಸೋಂಕು ಮತ್ತೊಮ್ಮೆ ಜನರನ್ನು ಭಯಭೀತರನ್ನಾಗಿಸಿ ಮುನ್ನೆಚ್ಚರಿಕೆವಹಿಸುವಂತೆ ಜನರಿಗೆ ಮನವಿ ಮಾಡಲಾಗುತ್ತಿದೆ. ನೆರೆ–ಯ ರಾಷ್ಟ್ರವಾದ ಚೀನಾದಿಂದ ಅತ್ಯಂತ ಆತಂಕಕಾರಿ ಸುದ್ದಿ ಬರುತ್ತಿದೆ, ಅಲ್ಲಿ ಕರೋನಾದಿಂದ ಮೊದಲ ಸಾವು ಕೂಡ ಜನವರಿ 2021 ರ ನಂತರ ಸಂಭವಿಸಿದೆ.

ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗವು ಜಿಲಿನ್‌ನಲ್ಲಿ ಸಾವು ಸಂಭವಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ, ಇದು ಎಚ್ಚರಿಕೆಯ ಗಂಟೆಯಾಗಿದೆ. ಇದಲ್ಲದೆ, ಮತ್ತೊಂದು ಭಯಾನಕ ಸುದ್ದಿ ಎಂದರೆ ಜಾಗತಿಕ ದೈನಂದಿನ ಪ್ರಕರಣಗಳು ಶೇಕಡಾ 12 ರಷ್ಟು ಹೆಚ್ಚಾಗಿದೆ. ಅದೇನೆಂದರೆ, ಕೊರೊನಾ ಅನೇಕ ದೇಶಗಳಲ್ಲಿ ವೇಗವಾಗಿ ಹರಡುತ್ತಿದೆ.

ಜಾಗತಿಕವಾಗಿ, ದೈನಂದಿನ ಪ್ರಕರಣಗಳ ಸರಾಸರಿ ಸಂಖ್ಯೆ ಶೇಕಡಾ 12 ರಷ್ಟು ಹೆಚ್ಚಾಗಿದ್ದು, 18 ಲಕ್ಷಕ್ಕೆ ಏರಿದೆ. ಈ ವಾರ ಫ್ರಾನ್ಸ್‌ನಲ್ಲಿ ಕೊರೊನಾ ಪ್ರಕರಣಗಳು 35% ರಷ್ಟು ಹೆಚ್ಚಾಗಿದ್ದರೆ, ಇಟಲಿ ಮತ್ತು ಯುಕೆ ತಲಾ 42% ರಷ್ಟು ಹೆಚ್ಚಾಗಿದೆ. ಗುರುವಾರ ಚೀನಾದಲ್ಲಿ 4,292 ಕೊರೊನಾ ಪ್ರಕರಣಗಳಿವೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ಶುಕ್ರವಾರ ತಿಳಿಸಿದೆ. ಅದೇ ಸಮಯದಲ್ಲಿ, ಚೀನಾದಲ್ಲಿ ಕೊರೊನಾದ ಸಕ್ರಿಯ ಪ್ರಕರಣಗಳ ಸಂಖ್ಯೆ ಪ್ರಸ್ತುತ 16,974 ಆಗಿದೆ. ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಕೊರೊನಾವೈರಸ್ ಮೊದಲು ವುಹಾನ್ ನಗರದಲ್ಲಿ ಕಾಣಿಸಿಕೊಂಡಿತು. ಚೀನಾದಲ್ಲಿ ಈವರೆಗೆ 4,636 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ.

ಅಮೆರಿಕದಲ್ಲಿ ಇನ್ನೂ ಎರಡು ಕೋಟಿಗೂ ಹೆಚ್ಚು ಸಕ್ರಿಯ ಕೊರೊನಾ ರೋಗಿಗಳಿದ್ದಾರೆ. ಆದಾಗ್ಯೂ, ವರದಿಯ ಪ್ರಕಾರ, ಕಳೆದ ಎರಡು ವಾರಗಳಲ್ಲಿ ದೇಶವು ಕೊರೊನಾದ ಹೊಸ ಪ್ರಕರಣಗಳಲ್ಲಿ ಇಳಿಕೆಯನ್ನು ದಾಖಲಿಸಿದೆ. ಆದರೆ ಅಪಾಯ ಉಳಿದಿದೆ. ಯುಎಸ್‌ನ ಕೆಲವು ಪ್ರದೇಶಗಳು ಸಾವಿನ ಪ್ರಮಾಣದಲ್ಲಿ ಹೆಚ್ಚಳವನ್ನು ಕಾಣುತ್ತಿವೆ.

ಯುರೋಪಿಯನ್ ದೇಶಗಳಲ್ಲಿ ಕೊರೊನಾದ ಹೊಸ ಪ್ರಕರಣಗಳು ವೇಗವಾಗಿ ಹೊರಬರುತ್ತಿವೆ. ಮಾರ್ಚ್ 18ರಂದು ಜರ್ಮನಿಯಲ್ಲಿ ಮಾತ್ರ ಸುಮಾರು 200,000 ಹೊಸ ಪ್ರಕರಣಗಳು ವರದಿಯಾಗಿವೆ. ಇಲ್ಲಿ ಒಟ್ಟು ಸಕ್ರಿಯ ಪ್ರಕರಣಗಳು ಸುಮಾರು 35 ಲಕ್ಷ. ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ವೆಬ್ ಸೈಟ್‌ನಲ್ಲಿ ಲಭ್ಯವಿರುವ ದತ್ತಾಂಶ ಮತ್ತು ಚಾರ್ಟ್ ಗಳ ಪ್ರಕಾರ, ಇತರ ಯುರೋಪಿಯನ್ ದೇಶಗಳಲ್ಲಿಯೂ ಪ್ರಕರಣಗಳು ವೇಗವಾಗಿ ಹೆಚ್ಚುತ್ತಿವೆ. ಇಂಗ್ಲೆಂಡ್, ನೆದರ್ಲ್ಯಾಂಡ್ಸ್, ಸ್ವಿಟ್ಜರ್ಲ್ಯಾಂಡ್ ಮತ್ತು ಇಟಲಿಯಲ್ಲಿ ಹೊಸ ಪ್ರಕರಣಗಳು ಹೆಚ್ಚುತ್ತಲೇ ಇವೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ



# ಬಿಡುಗಡೆ ಆಗದ ಅನುದಾನ ಮುಚ್ಚುವ ಭೀತಿಯಲ್ಲಿ ಇಂದಿರಾ ಕ್ಯಾಂಟೀನ್



**ಬೆಂಗಳೂರು,ಮಾ.19-** ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಗೆ ಕಳೆದ 10 ತಿಂಗಳಿನಿಂದ ಬಿಲ್ ಪಾವತಿ ಮಾಡದೆ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ನೂರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ವಹಣೆ ಮಾಡುತ್ತಿರುವ ಗುತ್ತಿಗೆ ಸಂಸ್ಥೆಗಳಿಗೆ ಕೋಟ್ಯಾಂತರ ರೂ. ಬಿಲ್ ಪಾವತಿ ಬಾಕಿ ಉಳಿದಿದೆ. ಕಳೆದ 10 ತಿಂಗಳಿನಿಂದ 22 ಕೋಟಿ ರೂ.ಗಳನ್ನು ಗುತ್ತಿಗೆದಾರರಿಗೆ ನೀಡಬೇಕಾಗಿದೆ.

ಬಾಕಿ ಹಣ ನೀಡದ ಹಿನ್ನೆಲೆಯಲ್ಲಿ ಕ್ಯಾಂಟೀನ್‌ಗಳನ್ನು ಮುಚ್ಚಲು ಗುತ್ತಿಗೆ ಸಂಸ್ಥೆಗಳು ಚಿಂತನೆ ನಡೆಸಿದ್ದು, ಇದರಿಂದ ನೂರಾರು ಕಾರ್ಮಿಕರು, ಅಡುಗೆ ಸಿಬ್ಬಂದಿ ಕೆಲಸ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಇಲ್ಲಿ ಕಡು ಬಡವರು, ಕೂಲಿ ಕಾರ್ಮಿಕರು, ವ್ಯಾಪಾರಿಗಳು, ಆಟೋ, ಟ್ಯಾಕ್ಸಿ ಚಾಲಕರಿಗೆ ರಿಯಾಯಿತಿ ದರದಲ್ಲಿ ಮೂರು ಹೊತ್ತು ಊಟ, ತಿಂಡಿ ನೀಡಲಾಗುತ್ತಿದೆ.

ಮತ್ತೊಂದೆಡೆ, ಗುತ್ತಿಗೆದಾರರು ಒಂದೊಮ್ಮೆ ಬಡವರ ಹಸಿವು ನೀಗಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚಿದರೆ, ಸಾವಿರಾರು ಮಂದಿಗೆ ತೊಂದರೆಯಾಗಲಿದೆ.

ಈ ಕುರಿತು ಪ್ರತಿಕ್ರಿಯಿಸಿದ ಗುತ್ತಿಗೆದಾರರೊಬ್ಬರು, ಸಂಸ್ಥೆಗೆ 10 ತಿಂಗಳಿನಿಂದ 22 ಕೋಟಿ ಬಾಕಿ ಹಣ ಬರಬೇಕಿದೆ. ಅಲ್ಲದೇ ಕಳೆದ ವರ್ಷದ ಪೌರಕಾರ್ಮಿಕರ ನಾಲ್ಕು ಕೋಟಿ ರೂ. ಬಿಲ್ ಬಾಕಿ ಇದೆ. ಹೀಗೆ, ಬಿಲ್ ಪಾವತಿ ಮಾಡದಿದ್ದರೆ ಬಾಗಿಲು ಮುಚ್ಚಬೇಕಾಗುತ್ತದೆ ಎಂದರು.

ಅದೇ ರೀತಿ, 800-900 ಜನ ಕೆಲಸಕ್ಕೆ ಇದ್ದು, ವೇತನ ಕೊಡಲು ಸಾಧ್ಯವಾಗುತ್ತಿಲ್ಲ, ಹಲವರು ಕೆಲಸ ಬಿಟ್ಟು ಹೋಗುತ್ತಿದ್ದಾರೆ ಎಂದೂ ಬೇಸರ ವ್ಯಕ್ತಪಡಿಸಿದರು.

**ತಗ್ಗಿದ ಗ್ರಾಹಕರು:** ದಿನೇ ದಿನೇ ಕ್ಯಾಂಟೀನ್‌ಗಳಲ್ಲಿ ಉಪಹಾರ ಸೇವಿಸುವವರ ಸಂಖ್ಯೆ ಕಡಿಮೆಯಾಗಿದೆ. ಕೆಲವೊಂದು ಕ್ಯಾಂಟೀನ್‌ಗಳಲ್ಲಿ ಬೆಳಗ್ಗೆ 200, ಮಧ್ಯಾಹ್ನ 100 ಮತ್ತು ರಾತ್ರಿ 50 ಮಂದಿಯಷ್ಟೇ ಆಹಾರ ಸೇವಿಸುತ್ತಿದ್ದಾರೆ.

ಕೊರೋನಾ ಭೀತಿಯಿಂದಾಗಿ ಹಲವು ಕ್ಯಾಂಟೀನ್‌ಗಳತ್ತ ಜನ ಸುಳಿಯುತ್ತಿಲ್ಲ. ಹೀಗಾಗಿ, ಹಲವು ಕ್ಯಾಂಟೀನ್‌ಗಳು ಗ್ರಾಹಕರಿಲ್ಲದೆ ಭಣಗುಡುತ್ತಿವೆ. ಪಾಲಿಕೆಯಿಂದ ಬಿಲ್ ಪಾವತಿಯಾಗದ ಹಿನ್ನೆಲೆಯಲ್ಲಿ ಗುತ್ತಿಗೆ ಸಂಸ್ಥೆಗಳು ದಿನಸಿ, ತರಕಾರಿ ಪೂರೈಸುತ್ತಿದ್ದವರಿಗೆ ಲಕ್ಷಾಂತರ ರೂ. ಬಾಕಿ ಉಳಿಸಿಕೊಂಡಿವೆ.

ಅದೇ ರೀತಿ, ನೀರು, ಒಳಚರಂಡಿ ಸಂಪರ್ಕ ಕಡಿತ ಗುತ್ತಿಗೆ ಸಂಸ್ಥೆಗಳು ಜಲಮಂಡಳಿಗೆ ಕೋಟ್ಯಂತರ ರೂ. ಶುಲ್ಕ ಬಾಕಿ ಉಳಿಸಿಕೊಂಡಿವೆ. ಹಾಗಾಗಿ, ಜಲಮಂಡಳಿಯು ಅಡುಗೆ ಮನೆ ಹಾಗೂ ಕ್ಯಾಂಟೀನ್‌ಗಳಿಗೆ ನೀರು, ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಿದೆ. ಆದ್ದರಿಂದ ಗುತ್ತಿಗೆ ಸಂಸ್ಥೆಗಳು ಖಾಸಗಿ ಟ್ಯಾಂಕರ್‌ಗಳಿಂದ ನೀರು ಖರೀದಿಸುತ್ತಿರುವ ಅಂಶವೂ ಗೊತ್ತಾಗಿದೆ.